ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

**ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ**

# ಉಳ್ಳಾಲ


ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಕೋಡಿಬೆಟ್ಟು ರಾಜಲಕ್ಷ್ಮಿ**

ಲೇಖಕರು

**ಡಾ. ಜ್ಯೋತಿ ಚೇಳ್ಯಾರು**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**ULLALA:** An Introducing Book on the Places in Karnataka that Played a Major Role in the Freedom Struggle, Written by Dr. Jyoti Chelayru, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಡಾ. ಜ್ಯೋತಿ ಚೇಳ್ಯಾರು

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೫೬


ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು-560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



ಕರ್ನಾಟಕ ಸರ್ಕಾರ

## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಸ್ವಾತಂತ್ರ್ಯ ಸಂಗ್ರಾಮದಲ್ಲಿ 'ಉಳ್ಳಾಲ' ಎಂಬ ವಿಷಯದ ಈ ಕಿರು ಹೊತ್ತಗೆಯ ರಚನೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಕಾರ್ಯ ಯೋಜನೆಯಲ್ಲಿ ಭಾಗವಹಿಸಲು ಅವಕಾಶವನ್ನು ನೀಡಿದುದಕ್ಕಾಗಿ ಅಕಾಡೆಮಿಯ ಅಧ್ಯಕ್ಷರು ಹಾಗೂ ಪದಾಧಿಕಾರಿಗಳಿಗೆ ಕೃತಜ್ಞತೆಗಳು. ಚರಿತ್ರೆ ಮತ್ತು ವರ್ತಮಾನವನ್ನು ಬೆಸೆಯುವ ಈ ಕೃತಿಯನ್ನು ಬರೆಯುವ ಬಗೆಗೆ ಸಂಪಾದಕ ಮಂಡಳಿಯ ಸದಸ್ಯರಾದ ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿಯವರು ಸಂಪರ್ಕಿಸಿದಾಗ, 'ಇರುವ ವಿಚಾರಗಳನ್ನು ಬರೆಯುವುದಲ್ಲವೇ' ಎಂದು ಒಪ್ಪಿಕೊಂಡೆ. ದಕ್ಷಿಣ ಕನ್ನಡ ಜಿಲ್ಲೆಗೆ ಬ್ರಿಟಿಷರು ಬರುವ ಮುನ್ನವೇ ಪೋರ್ಚುಗೀಸರು ವ್ಯಾಪಾರಕ್ಕಾಗಿ ಬಂದಿದ್ದರು. ಅವರ ವಿರುದ್ಧ ಹೋರಾಟಗಳು ನಡೆದಿದ್ದವು. ಅಬ್ಬಕ್ಕ ರಾಣಿ ಪೋರ್ಚುಗೀಸರ ವಿರುದ್ಧ ಹೋರಾಡಿದ ಧೀರ ಮಹಿಳೆ. ಹಾಗಾಗಿ ಈ ಕೃತಿಯಲ್ಲಿ ಆಕೆಯ ಹೋರಾಟವನ್ನು ವಿವರಿಸಲಾಗಿದೆ. ಆ ಬಳಿಕ ಎರಡನೆಯ ಭಾಗದಲ್ಲಿ ಬ್ರಿಟಿಷರ ವಿರುದ್ಧ ನಡೆದ ಹೋರಾಟಕ್ಕೆ ಉಳ್ಳಾಲ ನೀಡಿದ ಕೊಡುಗೆಯನ್ನು ಸಂಕ್ಷಿಪ್ತವಾಗಿ ಉಲ್ಲೇಖಿಸಲಾಗಿದೆ.

ಅಬ್ಬಕ್ಕ ರಾಣಿಯ ಮಾಹಿತಿ ನೀಡುವ ಬೇರೆ ಬೇರೆ ಕೃತಿಗಳನ್ನು ಪರಾಮರ್ಶಿಸಿದಾಗ "ಉಳ್ಳಾಲದ ರಾಣಿ ಅಬ್ಬಕ್ಕ"ಳ ಬಗ್ಗೆ ಒಂದಷ್ಟು ಗೊಂದಲಗಳು ಇರುವುದು ಸ್ಪಷ್ಟವಾಯಿತು. ಎಷ್ಟು ಮಂದಿ "ಅಬ್ಬಕ್ಕ" ರಿದ್ದರು ಎಂಬ ಪ್ರಶ್ನೆ ಮತ್ತು ಅವರ ಕಾಲದ ಪ್ರಶ್ನೆಗಳು ಬಹಳಷ್ಟು ಮುಖ್ಯವೆನಿಸಿತು. ಈ ಹಿನ್ನೆಲೆಯಲ್ಲಿ ಬೇರೆ ಬೇರೆ ಚರಿತ್ರಕಾರರು ಹೇಳಿರುವ ವಿಷಯಗಳನ್ನಷ್ಟೇ ಹೇಳುವ ಪ್ರಯತ್ನ ಇಲ್ಲಿಯದು. ಅಬ್ಬಕ್ಕಳ ಚರಿತ್ರೆ ಯಾಕೆ ಇಷ್ಟು ಗೊಂದಲಮಯ ಎಂಬುದರ ಜೊತೆಗೆ ತುಳುನಾಡಿನ ಸಾಮಾಜಿಕ ಸಾಂಸ್ಕೃತಿಕ ಅಂಶಗಳ ಬಗೆಗೆ ಸರಿಯಾದ ಗ್ರಹಿಕೆಯ ಸ್ಥಳೀಯ ಚರಿತ್ರಕಾರರು ಹಾಗೂ ವಿದೇಶೀಯರ

ಉಲ್ಲೇಖದ ತಾಳೆಯೇ ಮುಖ್ಯ ಎನಿಸಿತು. ಈ ಹಿನ್ನೆಲೆಯಲ್ಲಿ ಇರುವ ಆಕರಗಳನ್ನು ಗ್ರಹಿಸಿಕೊಂಡು ವಿವರಿಸುವ ಪ್ರಯತ್ನ ಮಾಡಲಾಗಿದೆ. 'ಅಬ್ಬಕ್ಕ'ಳ ಬಗೆಗೆ ಇನ್ನಷ್ಟು ಅಧ್ಯಯನಗಳ ಅಗತ್ಯವಿದೆ ಎಂದಷ್ಟೇ ಹೇಳಬಯಸುತ್ತೇನೆ. ಕೇವಲ ಹದಿನೈದು ದಿನಗಳ ಅವಧಿಯಲ್ಲಿ ಈ ಬರಹ ಸಿದ್ಧಪಡಿಸುವುದು ಅನಿವಾರ್ಯವಾಯಿತು.

ಕೃತಿ ರಚನೆಯ ಸಂದರ್ಭದಲ್ಲಿ ಮೊದಲ ಓದುಗಳಾಗಿ ಹಲವು ಸಂಶಯಗಳಿಗೆ ಪರಿಹಾರದ ದಿಕ್ಕನ್ನು ತೋರಿದ, ಕ್ಷೇತ್ರ ಕಾರ್ಯದ ಮತ್ತು ತನ್ನ ಅಧ್ಯಯನ ಅನುಭವದ ಮೂಲಕ ಮಾರ್ಗದರ್ಶನ ಮಾಡಿದ ಮಾತೃ ಹೃದಯದ ಇಂದಿರಾ ಹೆಗ್ಗಡೆಯವರಿಗೆ ಕೈ ಜೋಡಿಸಿ ಶಿರಬಾಗುವೆ. ಈ ಬರಹಕ್ಕೆ ಕೆಲ ಕೃತಿಗಳನ್ನು ನೀಡಿದ ಶ್ರೀ ಬೆನೆಟ್ ಅಮನ್ನ ಅವರಿಗೆ ಹಾಗೂ ಗೋವಿಂದದಾಸ ಕಾಲೇಜಿನ ಮುಖ್ಯ ಗ್ರಂಥಪಾಲಕಿ ಶ್ರೀಮತಿ ಸಾವಿತ್ರಿಯವರಿಗೂ ಕೃತಜ್ಞತೆಗಳು. ಬರಹದ ಸಂದರ್ಭದಲ್ಲಿ ಸಹಕಾರ ನೀಡಿದ ರಾಜಲಕ್ಷ್ಮಿಯವರಿಗೆ ಕೃತಜ್ಞತೆಗಳು.

**ಡಾ. ಜ್ಯೋತಿ ಚೇಳ್ಯಾರು**

## ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ಸ್ವಾತಂತ್ರ್ಯ ಹೋರಾಟದಲ್ಲಿ ಉಳ್ಳಾಲ | ೧೫ |
| ಅಬ್ಬಕ್ಕನ ಚೌಟ ಅರಸು ಮನೆತನ | ೨೭ |
| ಬ್ರಿಟಿಷರ ವಸಾಹತುಶಾಹಿ ಆಡಳಿತ ಮತ್ತು ಹೋರಾಟ | ೪೪ |
| ಆಕರ ಗ್ರಂಥಗಳು | ೪೭ |
| ● ಅನುಬಂಧ<br>ಛಾಯಾಚಿತ್ರಗಳು | ೪೯ |
| ● ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೫೩ |

# ಸ್ವಾತಂತ್ರ್ಯ ಹೋರಾಟದಲ್ಲಿ ಉಳ್ಳಾಲ

ಚರಿತ್ರೆಯೆನ್ನುವುದು ಗತಕ್ಕೆ ಸಂಬಂಧಿಸಿದ ಘಟನಾವಳಿಗಳ ಸರಮಾಲೆ ಎಂದು ಸರಳೀಕರಿಸಬಹುದಾದರೂ ಅದರಿಂದ ತಿಳಿಯುವ ವರ್ತಮಾನದ ಸಂಗತಿಗಳೂ ಇವೆ. ಪ್ರಾದೇಶಿಕತೆ, ಭೌಗೋಳಿಕತೆ, ಸಂಸ್ಕೃತಿ, ಕಲೆಯ ಆಗರವಾಗಿ ವೈವಿಧ್ಯತೆಗಳ ನಡುವೆಯೂ ಚರಿತ್ರೆಯನ್ನು ಕೆಲವು ಪ್ರದೇಶಗಳು ಉಳಿಸಿಕೊಳ್ಳುತ್ತವೆ. ಸಾರಿಗೆ ಸಂಪರ್ಕಗಳು ಇಲ್ಲದ ಕಾಲದಲ್ಲಿ ದಾಖಲು ಮಾಡಿರುವ ಶಾಸನಗಳು, ತಾಮ್ರಪತ್ರಗಳು, ಐತಿಹ್ಯಗಳು, ಕೋಟೆ ಕೊತ್ತಲಗಳು, ಐತಿಹಾಸಿಕ ಘಟನೆಗಳಿಗೆ ಸಾಕ್ಷಿಯೊದಗಿಸುತ್ತವೆ.

ನಮ್ಮ ನಾಡಿನಲ್ಲಿ ಖಚಿತ ಚರಿತ್ರಾತ್ಮಕ ದಾಖಲೆಗಳನ್ನು ಬರೆಯುವುದಾಗಲೀ, ಬರೆಸುವುದಾಗಲೀ ಅವುಗಳನ್ನು ರಕ್ಷಿಸಿಕೊಂಡು ಬರುವುದಾಗಲೀ ಕಡಿಮೆ. ಚಾರಿತ್ರಿಕ ದಾಖಲೆಗಳೆನಿಸುವ ಶಿಲಾಶಾಸನ, ತಾಮ್ರ ಶಾಸನಗಳಂಥ ಖಚಿತ ದಾಖಲೆಗಳನ್ನು ಆಧರಿಸಿ ಇತಿಹಾಸವನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಆದರೆ ಕೆಲವೊಮ್ಮೆ ಈ ಶಾಸನಗಳು ಕೂಡ ಆಳುವವರ ಪರ ಇರುತ್ತದೆ. ಜನಪರ ಇರುವುದಿಲ್ಲ. ಅಂತಹ ಸಂದರ್ಭದಲ್ಲಿ ಇತರ ಮೂಲಗಳ ಹುಡುಕಾಟ ನಡೆಸಬೇಕಾಗುತ್ತದೆ. ನಮ್ಮಲ್ಲಿ ಕೆಲವು ಸಂದರ್ಭಗಳಲ್ಲಿ ಚರಿತ್ರೆ ಎಂಬುದು ಬಹುಬೇಗನೇ ಐತಿಹ್ಯಗಳಾಗಿ ಬಿಡುತ್ತವೆ. ಹೀಗೆ ಬಾಯ್ದೆರೆಯಾಗಿ ಬಂದ ಐತಿಹ್ಯಗಳ ಅತಿಶಯೋಕ್ತಿ, ಅವಾಸ್ತವಿಕತೆಗಳನ್ನು ಕಳಚಿಟ್ಟು, ನಿಜ ಚರಿತ್ರೆಯನ್ನು ಬರೆಯುವುದು ತೀರಾ ಕಷ್ಟದ ವಿಚಾರ. ಹಾಗಿದ್ದರೂ ಐತಿಹ್ಯ ಜನಶ್ರುತಿಗಳೆಲ್ಲವನ್ನೂ ಸಾರಾಸಗಟಾಗಿ ನಿಷ್ಪ್ರಯೋಜಕವೆಂದು ತಳ್ಳಿಬಿಡುವ ಹಾಗಿಲ್ಲ. ಅದರ ಹಿನ್ನೆಲೆಯಲ್ಲಿಯೂ ಸತ್ಯವೊಂದು ಹುದುಗಿರಬಹುದು. ಹೆಂಟೆಯಲ್ಲಿ ಚಿನ್ನದ ಅದಿರು ಹುದುಗಿರುವಂತೆ ಚರಿತ್ರೆಯ ಕೆಲವು ಸತ್ಯಾಂಶಗಳು ಐತಿಹ್ಯಗಳಲ್ಲಿ ಹುದುಗಿರಬಹುದು. ಅವನ್ನು ಬೇರ್ಪಡಿಸುವ ಕೆಲಸ ನಮ್ಮಿಂದ ಆಗಬೇಕು.

## ಕರಾವಳಿಯ ಭೌಗೋಳಿಕ ಸ್ವರೂಪ

ಕರಾವಳಿಯ ಭೂಪ್ರದೇಶವೇ ವಿಶಿಷ್ಟವಾದುದು. ಎತ್ತರ–ತಗ್ಗು–ಏರು–ದಿಣ್ಣೆ–ಇಳಿಜಾರು ಇವುಗಳೆಲ್ಲದರಿಂದ ಕೂಡಿದ ಭೂ ಪ್ರದೇಶದಲ್ಲಿ ಕೃಷಿ ಮತ್ತು ವ್ಯಾಪಾರ ಎರಡೂ ಜತೆ ಜತೆಯಾಗಿಯೇ ಸಾಗಿದೆ. ಇಲ್ಲಿ ಬೆಳೆದ ಆಹಾರದ ಬೆಳೆಗಳೊಂದಿಗೆ, ವಾಣಿಜ್ಯ ಬೆಳೆಗಳು ಕರಾವಳಿಯನ್ನು ವ್ಯಾಪಾರದ ಕೇಂದ್ರವಾಗಿಸುವಲ್ಲಿ ಸಹಕಾರಿಯಾಗಿವೆ. ಬೆಳೆ ಬೆಳೆಯುವುದು ಮತ್ತು ಬೆಳೆಯನ್ನು ಮಾರಾಟ ಮಾಡುವ ಹಿನ್ನೆಲೆಯಲ್ಲಿ ವ್ಯಾಪಾರದ ಕೇಂದ್ರವಾಗಿಯೂ ಕರಾವಳಿಯು ತೀರಾ ಪ್ರಾಮುಖ್ಯತೆ ಪಡೆದಿದೆ. ತುಳುನಾಡು ಸಮುದ್ರದ ಕಿನಾರೆಯುದ್ದಕ್ಕೂ ಚಾಚಿರುವುದರಿಂದ ಇಲ್ಲಿಗೆ ವಿದೇಶದ ವಾಣಿಜ್ಯ ಸಂಪರ್ಕಗಳು ದೊರೆತಿವೆ. ದೇಶದ ಬೇರೆ ಭಾಗಗಳಿಂದ ಅಥವಾ  ವಿದೇಶಗಳಿಂದ ಹಡಗಿನ ಮೂಲಕ ಬರುವ ವ್ಯಾಪಾರಿಗಳು ಸಮುದ್ರ ದಂಡೆಯಲ್ಲಿ ಲಂಗರು ಹಾಕಿ, ದೋಣಿಯ ಮೂಲಕ ನದಿಮಾರ್ಗವಾಗಿ ಕರಾವಳಿಯ ಹಳ್ಳಿಗಳಿಗೂ ತೆರಳುವುದು ಸಾಧ್ಯವಾಗಿದ್ದರಿಂದ ಕರಾವಳಿ ಪ್ರದೇಶದಲ್ಲಿ ವ್ಯಾಪಾರ ಎಂಬುದು ಬದುಕಿನಲ್ಲಿ ಹಾಸುಹೊಕ್ಕಾಗಿರುವ ಅಂಶವಾಗಿತ್ತು. ಸಮುದ್ರ ದಂಡೆಯ ಮೇಲೆಯೇ ಇರುವ ಉಳ್ಳಾಲ ಎಂಬ ರಾಜ್ಯ ಕೂಡ ಇದೇ ಮಾದರಿಯ ವ್ಯಾಪಾರ ಕೇಂದ್ರವಾಗಿತ್ತು.

ಕರಾವಳಿ ಜಿಲ್ಲೆಗಳಲ್ಲಿದ್ದ ಕೃಷಿ ಸಂಪತ್ತು ವಿದೇಶೀಯರ ಗಮನ ಸೆಳೆದ ಪರಿಣಾಮವಾಗಿ, ಉಳ್ಳಾಲವು ವಿದೇಶೀಯರ ಆಕ್ರಮಣಕ್ಕೆ ಗುರಿಯಾಗ ಬೇಕಾಯಿತು. ಹೀಗಾಗಿ ಉಳ್ಳಾಲ ರಾಜ್ಯ ವಿದೇಶೀಯರ ಆಕ್ರಮಣಕ್ಕೆ ತುತ್ತಾಗುವ ಅಪಾಯ ಎದುರಿಸಿತು.

ಈ ಹಿಂದೆಯೂ ಮಧ್ಯಯುಗೀನ ಕಾಲದಲ್ಲಿ ಇಲ್ಲಿಯ ವಾಣಿಜ್ಯ ಬೆಳೆಗಳಿಗಾಗಿ ಕರಾವಳಿ ಪ್ರದೇಶವನ್ನು ತಮ್ಮ ಅಧೀನದಲ್ಲಿ ಇರಿಸಿಕೊಳ್ಳಲು, ಘಟ್ಟ ಪ್ರದೇಶದ ಮೇಲ್ಭಾಗದ ಅರಸರು ಹೋರಾಡುತ್ತಿದ್ದರು. ಅನೇಕ ಅರಸು ಮನೆತನಗಳು ಇಲ್ಲಿ ದೀರ್ಘ ಕಾಲ ಆಳ್ವಿಕೆಯನ್ನು ನಡೆಸಿದ್ದರು. ಕರಾವಳಿಯ ಸಾಂಸ್ಕೃತಿಕ, ಆರ್ಥಿಕ, ಬದಲಾವಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಮುಖ್ಯವಾಗಿ ಬಲಿಷ್ಠ ರಾಜಕೀಯ ಶಕ್ತಿಯಾಗಿ, ಆಳ್ವಿಕೆ ಮಾಡಿದ್ದರು. ವಿಜಯನಗರ ಕಾಲಾನಂತರ ಇಲ್ಲಿಯ ತುಂಡರಸರು ಒಬ್ಬರ ಮೇಲೊಬ್ಬರು ಅಧಿಪತ್ಯ ಸಾಧಿಸಲು ಯತ್ನಿಸುತ್ತಿದ್ದರು. ಅನೇಕ ತುಂಡರಸರು ವಿಜಯನಗರ ಸಾಮ್ರಾಜ್ಯದ ವ್ಯಾಪ್ತಿಯಲ್ಲಿ ರಾಜ್ಯಭಾರ ನಡೆಸುತ್ತಿದ್ದರು. ಸ್ಥಳೀಯ ಅರಸರ ಅಧಿಕಾರವನ್ನು ಗೌರವಿಸುತ್ತಿದ್ದ



ವಿಜಯನಗರದ ಅರಸರು ರಾಜಕೀಯ ಪ್ರತಿನಿಧಿಗಳನ್ನು ನೇಮಿಸಿದ್ದರು. ಈ ಮೂಲಕ ತುಂಡರಸರ ಮೇಲೆ ತನ್ನ ಅಧಿಕಾರ ಸ್ಥಾಪಿಸಿದ್ದರು. ಅವರಿಗೆ ಅವಕಾಶ ಮಾಡಿಕೊಟ್ಟ ಕಾರಣದಿಂದ ಈ ಸ್ಥಳೀಯ ಅರಸರು ತಮ್ಮ ವಿಧೇಯತೆಯನ್ನು ವಿಜಯನಗರದ ಅರಸರಿಗೆ ಪ್ರದರ್ಶಿಸಿಕೊಂಡು ಅಧಿಕಾರ ನಡೆಸಲು ಸಾಧ್ಯವಾಯಿತು. ವಿಜಯನಗರದ ಅರಸರ ಆಳ್ವಿಕೆ ಪತನಗೊಳ್ಳುತ್ತಿದ್ದಂತೆ ತುಂಡರಸರ ಸಾರ್ವಭೌಮತ್ವ ಈ ಭಾಗದಲ್ಲಿ ಚಾಲನೆಗೆ ಬಂತು. ಜೊತೆಗೆ ತುಂಡರಸರ ನಡುವೆ ಇದ್ದ ವೈಷಮ್ಯದ ಲಾಭ ಪಡೆಯಲು ವಿದೇಶೀಯರು ಪ್ರಯತ್ನಿಸಿ ಯಶಸ್ವಿಯಾದರು.

## ಸಿಪಾಯಿ ದಂಗೆಗೂ ಮುನ್ನ ಹೊತ್ತಿದ ಹೋರಾಟದ ಕಿಚ್ಚು

ಭಾರತದ ಸ್ವಾತಂತ್ರ್ಯ ಚಳವಳಿಯನ್ನು ದಾಖಲು ಮಾಡುವಾಗ ೧೮೫೭ರ ಸಿಪಾಯಿ ದಂಗೆ ಮೊದಲ ಸ್ವಾತಂತ್ರ್ಯ ಹೋರಾಟ ಎಂಬುದಾಗಿ ಹೇಳಲಾಗುತ್ತದೆ. ವಾಸ್ತವದಲ್ಲಿ ಪ್ರಾದೇಶಿಕವಾಗಿ ಇದ್ದ ನೂರಾರು ಅರಸು ಮನೆತನಗಳು ತಮ್ಮ ರಾಜ್ಯವನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಹೋರಾಟಗಳನ್ನು ನಡೆಸುತ್ತಲೇ ಬಂದರು. ಭೂಮಿ ಮತ್ತು ಸಂಪತ್ತಿನ ಒಡೆತನವನ್ನು ಹೊಂದಿ ಆರ್ಥಿಕವಾಗಿ ಸುಸ್ಥಿರವಾದ ವ್ಯಾಪಾರ ಕೇಂದ್ರಗಳ ಬಗೆಗೆ ಹೆಚ್ಚು ಗಮನವನ್ನು ಕೊಟ್ಟಿದ್ದಾರೆ. ಕ್ರಿ.ಪೂ ಕಾಲದಿಂದಲೂ ವ್ಯಾಪಾರ ವಹಿವಾಟುಗಳಿಗೆ ಭಾರತದ ಕರಾವಳಿಯ ರಾಜ್ಯಗಳು ಪ್ರಸಿದ್ಧಿ ಪಡೆದಿದ್ದವು. ಕ್ರಿ.ಶ. ೧೪೯೮ರಲ್ಲಿ ವಾಸ್ಕೋಡಗಾಮನು ಭಾರತಕ್ಕೆ ಸಮುದ್ರ ಮಾರ್ಗವನ್ನು ಕಂಡು ಹಿಡಿದ ಬಳಿಕ ಪ್ರಯಾಣಗಳು ಇನ್ನೂ ಸಲೀಸಾದವು. ಯುರೋಪಿನ ಸಣ್ಣ ಪುಟ್ಟ ದೇಶಗಳು, ಭಾರತದೊಡನೆ ವ್ಯಾಪಾರ ನಡೆಸಲು ತುದಿಗಾಲಲ್ಲಿ ನಿಂತಿದ್ದವು. ಭಾರತದ ಅಕ್ಕಿ, ದವಸ ಧಾನ್ಯ ಮತ್ತು ಸಾಂಬಾರ ಎಲ್ಲಾ ಕೆಡದೆ ಶೋಮಣಿಕಬೇಕು. ಪದಾರ್ಥಗಳಿಗೆ ಅಲ್ಲಿ ಬೇಡಿಕೆ ಇತ್ತು. ಭಾರತದೊಡನೆ ವ್ಯಾಪಾರೀ ಸಂಬಂಧ ಇರಿಸಿಕೊಳ್ಳುವುದು ಅಲ್ಲಿನ ರಾಜರಿಗೆ ಪ್ರತಿಷ್ಠೆಯ ವಿಷಯವಾಗಿತ್ತು. ವ್ಯಾಪಾರದ ಕೌಶಲ್ಯದಿಂದ ಸಂಪತ್ತನ್ನು ವೃದ್ಧಿಸಿಕೊಳ್ಳಲು ಸರಕುಗಳ ವಹಿವಾಟು ನಡೆಸುತ್ತಿದ್ದರು. ಹೀಗೆ ವ್ಯಾಪಾರಕ್ಕೆಂದು ತಕ್ಕಡಿ ಹಿಡಿದು ಬಂದ ವಿದೇಶಿಯರು ಭಾರತದ ಸಂಪತ್ತಿನ ಕಡೆ ಆಕರ್ಷಿತರಾದರು. ಪರಿಣಾಮ ಇಲ್ಲಿನ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ವ್ಯವಸ್ಥೆಯನ್ನು ಸೂಕ್ತವಾಗಿ ಪರಿಶೀಲಿಸಿ ಮುಂದೆ 'ಭೂಮಿ' ಯ ಒಡೆತನ ಹೊಂದುವುದಕ್ಕಾಗಿ ತಂತ್ರಗಾರಿಕೆಗಳನ್ನು ರೂಪಿಸಿದರು. ಸ್ಥಳೀಯ ಆಡಳಿತಗಳಲ್ಲಿರುವ ಹುಳುಕುಗಳನ್ನು

ಗಮನಿಸಿ ಅವರ ಕಾರ್ಯ ಚಟುವಟಿಕೆಗಳಲ್ಲಿ ಮಧ್ಯಪ್ರವೇಶಿಸಿದರು. ಜೊತೆಗೆ ಆಕ್ರಮಣಶೀಲತೆಯನ್ನು ಹೊಂದಿದ್ದರು. ಹಿಂಸೆ, ಕ್ರೌರ್ಯ ಮತ್ತು ಯುದ್ಧಗಳ ಪರಮಾವಧಿಯಲ್ಲಿ ಎಲ್ಲವನ್ನು ಅಧೀನಕ್ಕೆ ಪಡೆಯುವ ಪ್ರಯತ್ನಗಳು ನಿರಂತರವಾಗಿ ನಡೆದವು. ಅವರ ರಾಜಕೀಯದ ತಂತ್ರಗಾರಿಕೆ ಮತ್ತು ಆಡಳಿತ ತಂತ್ರಗಾರಿಕೆಯು ಇಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಯುರೋಪಿನಲ್ಲಿ ನಡೆದ ಕೈಗಾರಿಕಾ ಕ್ರಾಂತಿಯ ಕಾರಣವಾಗಿ ಯುರೋಪ್ ದೇಶಗಳು ಆಧುನಿಕವಾದ ಶಸ್ತ್ರಾಸ್ತ್ರಗಳನ್ನು ಹೊಂದಿದ್ದು, ಸಾಂಪ್ರದಾಯಿಕ ಶೈಲಿಯ ಯುದ್ಧ ತಂತ್ರಗಳಿಗಿಂತ ಭಿನ್ನವಾದ ರೀತಿಯಲ್ಲಿ ಆಕ್ರಮಣಗಳನ್ನು ನಡೆಸುತ್ತಿದ್ದವು. ಪರಿಣಾಮವಾಗಿ ಭಾರತದಲ್ಲಿ ಒಂದಾದ ಮೇಲೊಂದರಂತೆ ರಾಜ್ಯಗಳನ್ನು ಗೆಲ್ಲುತ್ತಾ ಭೂಮಿಯ ಮೇಲಿನ ತಮ್ಮ ಒಡೆತನವನ್ನು ಸ್ಥಾಪಿಸಿದರು. ಆಧುನಿಕ ಎನ್ನುವ ವಿದೇಶಿ ಸಾಮ್ರಾಜ್ಯ ಶಕ್ತಿಗಳ ಎದುರು ತೀರಾ ಸಾಂಪ್ರದಾಯಿಕ ಶೈಲಿಯ ಜನಜೀವನವನ್ನು ಹೊಂದಿದ ರಾಜರುಗಳು ತಮ್ಮ ಆತ್ಮಗೌರವವನ್ನು ಕಳೆದುಕೊಳ್ಳದೆ ಪ್ರತಿರೋಧಗಳನ್ನು ಒಡ್ಡುತ್ತಾ ಬಂದರು. ತೀರಾ ಶರಣಾಗತಿಯ ಮನಸ್ಥಿತಿಯನ್ನು ಕೆಲವು ರಾಜರು ಹೊಂದಿ, ತಮ್ಮವರಿಗೇ ಮೋಸ ಮಾಡಿದ ಅನೇಕ ಕತೆಗಳನ್ನು ಕೇಳಿದ್ದೇವೆ. ಸ್ವಾರ್ಥದ ಕಿಂಚಿತ್ ಲಾಭಕ್ಕಾಗಿ ವಿದೇಶಿಯರನ್ನು ತೆರೆದ ತೋಳಿನಿಂದ ಸ್ವಾಗತಿಸಿದವರನ್ನು ಇತಿಹಾಸದಲ್ಲಿ ಕಾಣಬಹುದು. ಅಂತಹವರ ಸಾಲಿಗೆ ಸೇರಿದ ರಾಜನೆಂದರೆ ಕರಾವಳಿಯ ಬಂಗಾಡಿಯ ಲಕ್ಷ್ಮಪ್ಪ ಬಂಗರಸರು. ಈತ ವಿದೇಶೀಯರ ಜೊತೆ ಶಾಮೀಲಾಗಿದ್ದನ್ನು ನೋಡಿ ಧೃತಿಗೆಡದೇ, ತಾಯ್ನಾಡಿಗಾಗಿ ಸ್ವಾಭಿಮಾನದಿಂದ ಹೋರಾಡಿದ ಮಹಿಳೆ, ಆತನ ಪತ್ನಿ ರಾಣಿ ಅಬ್ಬಕ್ಕ.

ತನಗೆ ಎದುರಾದ ಅನೇಕ ವೈರುಧ್ಯಗಳ ನಡುವೆ ತುಳುನಾಡಿನ ಹೆಣ್ಣು ಮಗಳು ಅಬ್ಬಕ್ಕ ತೋರಿದ ಕೆಚ್ಚು ಅಪ್ರತಿಮವಾದುದು. ಪತಿಯೇ ವಿದೇಶಿಯರೊಂದಿಗೆ ಸ್ನೇಹ ಬೆಳೆಸಿಕೊಂಡು ತನಗೆ ಎದುರು ನಿಂತ ಸಂದರ್ಭದಲ್ಲಿ ಆಕೆ ಧೃತಿಗೆಡಲಿಲ್ಲ. 'ಬದುಕುವ ದಾರಿ'ಯನ್ನು ಕಂಡುಕೊಂಡಾಗ ಆಕೆ ಪ್ರತಿಭಟಿಸಿದಳು. ತನ್ನ ಮಾತನ್ನು ಗಂಡ ಕೇಳದೇ ಇದ್ದಾಗ, ಅದೇ ಕಾರಣಕ್ಕೆ ಸಾಂಸಾರಿಕ ಬದುಕಿನಲ್ಲಿ ಬಿರುಕು ಕಾಣಿಸಿಕೊಂಡಿತು. ಆದರೂ ಧೃತಿಗೆಡದೆ ತನ್ನ ವಿಚಾರಗಳಿಗೆ ಬದ್ಧಳಾದವಳು ಉಳ್ಳಾಲದ ರಾಣಿ ಅಬ್ಬಕ್ಕ. ತನ್ನ ನೆಲ, ವ್ಯಾಪಾರ, ಆಡಳಿತಗಳಲ್ಲಿ ಸ್ವಂತಿಕೆಯನ್ನು ಕಂಡುಕೊಂಡವಳು. ಸ್ವಾಭಿಮಾನಿ ಹೆಣ್ಣು ಮಗಳೊಬ್ಬಳು ತನ್ನ ರಾಜ್ಯವನ್ನು ರಕ್ಷಿಸಿಕೊಳ್ಳಲು ನಡೆಸಿದ ಹೋರಾಟ ಚರಿತ್ರೆಯಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಒಂದರ್ಥದಲ್ಲಿ ಇದು ಭಾರತದ ಮೊದಲ ಸ್ವಾತಂತ್ರ್ಯ ಹೋರಾಟವೂ ಹೌದು. ಮಧ್ಯಯುಗೀನ ಭಾರತದಲ್ಲಿ, ತಾವು ಬದುಕುಳಿಯುವ, ತಮ್ಮ ರಾಜ್ಯವನ್ನು ಉಳಿಸಿಕೊಂಡರೆ ಸಾಕು ಎಂಬ ಸ್ವಾರ್ಥ ಮನೋಧರ್ಮಗಳ ನಡುವೆ ಸ್ವಾಭಿಮಾನ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸುವಂತಹ ನಡೆಯನ್ನು ಪ್ರಕಟಪಡಿಸಿದವಳು ಅಬ್ಬಕ್ಕ.

ಮಧ್ಯಯುಗೀನ ಕಾಲಕ್ಕೆ ಬಹಳ ಬಲಿಷ್ಠ ಸಾಮ್ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾದ ನಾಡು ಪೋರ್ಚುಗೀಸರದು. ತಮ್ಮ ಅಗಾಧವಾದ ಸೈನ್ಯ ಬಲ, ಮದ್ದುಗುಂಡುಗಳು ಆಧುನಿಕ ಶಸ್ತ್ರಾಸ್ತ್ರಗಳು, ವಿಸ್ತಾರವಾದ ಸಾಮ್ರಾಜ್ಯ ಹೊಂದಿದ್ದರು. ಆದರೆ ತುಳುನಾಡಿನ ರಾಣಿ ಅಬ್ಬಕ್ಕಳ ವಿರುದ್ಧ ತಾವೇ ಯುದ್ಧ ಸಾರಿ ಅವರು ಸೋಲೊಪ್ಪಿಕೊಳ್ಳಬೇಕಾಯಿತು. ಹಾಗಾಗಿ ಇಂದಿಗೂ ಯುರೋಪ್ ದೇಶದ ಪೋರ್ಚುಗಲ್ ಚರಿತ್ರೆಯನ್ನು ಬರೆಯುವಾಗ ರಾಣಿ ಅಬ್ಬಕ್ಕಳ ಹೆಸರು ಚಿರಸ್ಥಾಯಿಯಾಗಿ ಉಳಿದಿದೆ.

## ಭೌಗೋಳಿಕತೆ

ಸ್ವಾತಂತ್ರ್ಯ ಹೋರಾಟದಲ್ಲಿ 'ಉಳ್ಳಾಲ' ಎನ್ನುವಾಗ ಉಳ್ಳಾಲ ಎಂಬ ಭೌಗೋಳಿಕ ಪರಿಸರದ ಬಗೆಗೂ ತಿಳಿಯಬೇಕಾಗುತ್ತದೆ. ಕರ್ನಾಟಕದ ಕರಾವಳಿಯ ಒಂದು ರೇವು ಪಟ್ಟಣವಾಗಿದ್ದ ಸ್ಥಳ ಉಳ್ಳಾಲ. ಇದು ಕಡಲ ಕಿನಾರೆಯ ಒಂದು ರಾಜ್ಯವಾಗಿದ್ದು, ಮಂಗಳೂರಿನಿಂದ ೮ ಕಿ.ಮೀ. ದಕ್ಷಿಣಕ್ಕೆ ನೇತ್ರಾವತಿ ನದಿಯ ದಡದಲ್ಲಿದೆ. ಉಳ್ಳಾಲದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದಲ್ಲಿ ಎರಡು ಅಧ್ಯಾಯಗಳಿವೆ.

೧. ಮಧ್ಯಯುಗೀನ ಕಾಲದ ಪೋರ್ಚುಗೀಸರ ಆಕ್ರಮಣ ಮತ್ತು ಪ್ರತಿರೋಧ

೨. ಬ್ರಿಟಿಷರ ವಸಾಹತುಶಾಹಿ ಆಡಳಿತದ ವಿರುದ್ಧ ನಡೆದ ಹೋರಾಟ

ಮಧ್ಯಯುಗೀನ ಕಾಲದ ಪೋರ್ಚುಗೀಸರ ಆಕ್ರಮಣ ಮತ್ತು ಪ್ರತಿರೋಧವನ್ನು ಮೊದಲಿಗೆ ಗಮನಿಸೋಣ. ಬಾರ್ಕೂರು ಉದಯ ಅವರು

ಬರೆದ ಕೃತಿ 'ಇತಿಹಾಸದ ಶೋಧ– ಗತದ ಹುಡುಕಾಟ, ತುಳುಸಂಸ್ಕೃತಿ, ಚರಿತ್ರೆ, ಕಥನ' ಎಂಬ ಕೃತಿಯ ಪ್ರಕಾರ ಕರಾವಳಿ ಪ್ರದೇಶದ ಅಂದಿನ ಸ್ಥಿತಿಗತಿಯನ್ನು ಹೀಗೆ ಗ್ರಹಿಸಬಹುದು:

ಇಡೀ ಕರಾವಳಿ ಕರ್ನಾಟಕ ಪ್ರದೇಶದಲ್ಲಿ ಪೋರ್ಚುಗೀಸರು ತಮ್ಮದೇ ಯಜಮಾನಿಕೆಯನ್ನು ಗಟ್ಟಿಗೊಳಿಸಲು ಸ್ಥಳೀಯ ತುಂಡರಸರೊಂದಿಗೆ ಬೇರೆಬೇರೆ ರೀತಿಯ ರಾಜಕೀಯ ಕುತಂತ್ರಗಳನ್ನು ಹೆಣೆದಿದ್ದರು. ವಿಜಯನಗರದ ಅರಸರ ಸಾರ್ವಭೌಮತ್ವವನ್ನು ಒಪ್ಪಿಕೊಂಡ ಬಹುತೇಕ ಎಲ್ಲಾ ಸ್ಥಳೀಯ ಅರಸರಿಗೆ ಆಡಳಿತಾತ್ಮಕ ಸ್ವಾತಂತ್ರ್ಯವನ್ನು ನೀಡಲಾಗಿತ್ತು. ಇದೇ ಹೊತ್ತಿನಲ್ಲಿ ಪೋರ್ಚುಗೀಸರು ಇಲ್ಲಿ ಹೇರಳವಾಗಿ ದೊರಕುವ ಕರಿಮೆಣಸು, ಅಕ್ಕಿ, ತೆಂಗು ಇತ್ಯಾದಿ ವಸ್ತುಗಳ ವ್ಯಾಪಾರ ವಹಿವಾಟಿನ ಮೇಲೆ ನಿಗಾ ಇಟ್ಟಿದ್ದರು. ಇದಕ್ಕೆ ಪೂರಕವಾಗುವಂತೆ ಕರಾವಳಿಯ ವಿವಿಧೆಡೆಗಳಲ್ಲಿ ತಮ್ಮದೇ ಸ್ವತಂತ್ರ ವ್ಯಾಪಾರಿ ನೆಲೆಗಳನ್ನು ಸ್ಥಾಪಿಸಿದರು. ಆರಂಭದಲ್ಲಿ ಅವರ ಚಟುವಟಿಕೆಗಳಿಗೆ ವಿಜಯನಗರದ ಅರಸರ ಬೆಂಬಲ ಕೂಡಾ ಇತ್ತು. ಇದು ಸ್ಥಳೀಯ ಬೆಳೆಗಾರರಿಗೂ, ಖರೀದಿಸುವ ವಿದೇಶೀಯರಿಗೂ ಲಾಭ ತರುವಂತಹ ವಹಿವಾಟು ಆಗಿದ್ದರಿಂದ ಪರಸ್ಪರ ಹೊಂದಾಣಿಕೆ ಮಾಡಿಕೊಳ್ಳುವುದು ಪೋರ್ಚುಗೀಸರಿಗೂ, ವಿಜಯನಗರದ ಅರಸರಿಗೂ ಒಳ್ಳೆಯ ತಂತ್ರ ಎನಿಸಿತ್ತು. ಅದೇ ರೀತಿ ಕೆಲವು ಕಾಲದ ಮಟ್ಟಿಗೆ ಇಬ್ಬರಿಗೂ ಒಳ್ಳೆಯ ಫಲಿತಾಂಶವೂ ದೊರೆಯಿತು.

ಅರಬ್ ಜಗತ್ತಿನಿಂದ ಉತ್ತಮ ತಳಿಯ ಕುದುರೆಗಳನ್ನು ಪೋರ್ಚುಗೀಸರಿಂದ ಪಡೆಯುವುದು ವಿಜಯನಗರದ ಅರಸರ ಉದ್ದೇಶವಾದರೆ, ವಿಜಯನಗರದ ಅರಸರಿಂದ ಅಧಿಕೃತ ಒಪ್ಪಿಗೆ ಪಡೆದು, ಇಡೀ ಕರಾವಳಿಯ ಬಂದರು ಪ್ರದೇಶಗಳಲ್ಲಿ ತಮ್ಮ ವ್ಯಾಪಾರ ನೆಲೆಗಳನ್ನು ಸ್ಥಾಪಿಸಿ ಲಾಭದಾಯಕ ವ್ಯಾಪಾರವನ್ನು ವೃದ್ಧಿಸುವುದು ಪೋರ್ಚುಗೀಸರ ಉದ್ದೇಶ. ಆದರೆ ಹೀಗೆ ವ್ಯಾಪಾರ ವೃದ್ಧಿಸಿಕೊಳ್ಳಲು ಪೋರ್ಚುಗೀಸರಿಗೆ ಅನೇಕ ಸವಾಲುಗಳೂ ಇದ್ದವು.

ಕರಾವಳಿ ಪ್ರದೇಶವು ವಿಜಯನಗರ ಅರಸರ ಅಧೀನಕ್ಕೆ ಮೇಲ್ನೋಟಕ್ಕೆ ಒಳಪಟ್ಟಿತ್ತಾದರೂ ವಾಸ್ತವದಲ್ಲಿ ಸ್ಥಳೀಯ ಅರಸರಿಗೆ ಆಡಳಿತ ನಡೆಸುವ ಸ್ವಾತಂತ್ರ್ಯವಿತ್ತು. ಇಲ್ಲಿದ್ದ ಬೇರೆ ಬೇರೆ ಅರಸು ಮನೆತನಗಳು ಬಲಿಷ್ಠರಾಗಿದ್ದವು.



ಇವರು ತಮ್ಮ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಲ್ಲಿ ತಾವೇ ಯಜಮಾನರಾಗಿ ಅಲ್ಲಿನ ಆಗುಹೋಗುಗಳನ್ನು ನಿಯಂತ್ರಿಸುತ್ತಿದ್ದರು. ಆದ್ದರಿಂದ ಸ್ಥಳೀಯರ ಅರಸರನ್ನು ಗೆಲ್ಲುವುದು ಪೋರ್ಚುಗೀಸರಿಗೆ ಅಗತ್ಯವಾಗಿತ್ತು.

ಪೋರ್ಚುಗೀಸರು ಹಡಗುಗಳ ಮೂಲಕ ವ್ಯಾಪಾರ ವಹಿವಾಟು ಮಾಡುತ್ತಿದ್ದುದರಿಂದ ಅವರಿಗೆ ಸ್ಥಳೀಯರ ಸಹಕಾರ ಬೇಕಾಗಿತ್ತು. ಪೋರ್ಚುಗೀಸರು ಮತ್ತು ವಿಜಯನಗರದ ಅರಸರು ವ್ಯಾಪಾರಕ್ಕಾಗಿ ಪರಸ್ಪರ ಅವಲಂಬಿತ ಒಪ್ಪಂದಗಳನ್ನು ಮಾಡಿಕೊಂಡಿದ್ದರೂ, ಸ್ಥಳೀಯ ಸಹಕಾರವೇ ಅವರಿಗೆ ಅತ್ಯಂತ ಮುಖ್ಯವಾಗಿದ್ದರಿಂದ ಅದನ್ನು ಪಡೆಯಲು ಅವರು ಎಲ್ಲ ದಾರಿಗಳನ್ನೂ ಅನುಸರಿಸಲು ಸಿದ್ಧರಿದ್ದರು. ಸ್ಥಳೀಯ ಅರಸರೊಂದಿಗೆ ಪ್ರತ್ಯೇಕವಾಗಿ ಒಳ ಒಪ್ಪಂದಗಳನ್ನು ಮಾಡಿಕೊಳ್ಳುವ ನಿಟ್ಟಿನಲ್ಲಿ ಅವರು ಕುತಂತ್ರಗಳನ್ನೂ ಮಾಡುತ್ತ ಲಾಭ ಪಡೆಯಲು ಸಂಚು ರೂಪಿಸುತ್ತಲೇ ಇದ್ದರು.

ಸ್ಥಳೀಯವಾಗಿ ಕೆಳದಿ ನಾಯಕರು, ಗೇರುಸೊಪ್ಪೆಯ ಸಾಳ್ವರು, ಕಾರ್ಕಳದ ಬೈರರಸರು, ಬಂಗಾಡಿಯ ಬಂಗರು, ಪುತಿಗೆಯ ಚೌಟರು, ಅಜಿಲರು, ಸಾವಂತರು ಹಾಗೂ ಉಳ್ಳಾಲ ಪ್ರದೇಶದ ರಾಣಿ ಅಬ್ಬಕ್ಕ ಪ್ರತ್ಯೇಕ ರಾಜ್ಯವನ್ನು ಪ್ರತಿನಿಧಿಸುತ್ತಿದ್ದವರು. ಈ ಅರಸೊತ್ತಿಗೆಯ ಪ್ರಾಬಲ್ಯವಿರುವ ಬಹುತೇಕ ಎಲ್ಲಾ ಪ್ರಾಂತ್ಯಗಳಲ್ಲಿ ಹೇರಳವಾಗಿ ಬೆಳೆ ಬಾಳುವವಸ್ತುಗಳು ಲಭ್ಯವಿದ್ದವು. ಇದು ಪೋರ್ಚುಗೀಸರನ್ನು ಬಹಳವಾಗಿ ಆಕರ್ಷಿಸಿತ್ತು.

ಈ ವಸ್ತುಗಳ ಸಂಗ್ರಹ ಮಾಡುವುದು, ಸ್ಥಳೀಯ ಅರಸರ ಬೆಂಬಲ ಪಡೆಯುವುದು ಅವರಿಗೆ ಮುಖ್ಯವಾಗಿತ್ತು. ತಾವು ಬಯಸುವ ಕರಿಮೆಣಸು, ಅಕ್ಕಿ, ತೆಂಗು, ಅಡಿಕೆ, ಶುಂಠಿ ಇತ್ಯಾದಿ ಅಮೂಲ್ಯ ವಸ್ತುಗಳನ್ನು ಅತ್ಯಂತ ಕಡಿಮೆ ಬೆಲೆಗೆ ಖರೀದಿಸಿ, ಮಧ್ಯಪ್ರಾಚ್ಯ ವ್ಯಾಪಾರ ಕೇಂದ್ರಗಳಲ್ಲಿ ಮತ್ತು ಯುರೋಪಿನಲ್ಲಿ ಅತ್ಯಂತ ಹೆಚ್ಚು ಬೆಲೆಗೆ ಮಾರಾಟ ಮಾಡುವ ಅವರ ದೀರ್ಘಾವಧಿಯ ಉದ್ದೇಶ ಈಡೇರಿಸಿಕೊಳ್ಳಲು ಅವರು ಯಾವುದೇ ಮಾರ್ಗವನ್ನು ಅನುಸರಿಸಲು ಸಿದ್ಧರಾಗಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶವೊಂದನ್ನು ವಶಮಾಡಿಕೊಂಡರೆ ಪೋರ್ಚುಗೀಸರಿಗೆ ಮತ್ತೊಂದು ಲಾಭವಿತ್ತು. ಅವರು ಇದೇ ವಸ್ತುಗಳನ್ನು ಕೊಂಡುಕೊಳ್ಳಲು ಅನವಶ್ಯವಾಗಿ ದುಬಾರಿ ಬೆಲೆ ತೆತ್ತು ಕೊಚ್ಚಿನ್ ಮತ್ತು

ಮಲಬಾರ್ ಪ್ರಾಂತ್ಯಗಳನ್ನು ಅವಲಂಬಿಸಬೇಕಾಗಿರಲಿಲ್ಲ. ಕೊಚ್ಚಿನ್ ಮತ್ತು ಮಲಬಾರ್ ಪ್ರಾಂತಗಳಲ್ಲಿ ಸ್ಥಳೀಯ ವ್ಯಾಪಾರಿಗಳಿಂದ ವಸ್ತುಗಳನ್ನು ಕೊಂಡುಕೊಳ್ಳಲು ತೀವ್ರತರವಾದ ಪೈಪೋಟಿ ಇತ್ತು. ಆದ್ದರಿಂದ ಬೆಲೆ ದುಬಾರಿಯಾಗಿರುತ್ತಿತ್ತು.

ಅಲ್ಲಿ ಅವರು ವಿವಿಧ ರೀತಿಯ ಕಾನೂನು ತೊಡಕುಗಳನ್ನು ದಾಟಿ ಮುಂದುವರೆಯಬೇಕಿತ್ತು. ಅವುಗಳೆಲ್ಲಕ್ಕಿಂತಲೂ ಮುಖ್ಯ ವಿಷಯವೆಂದರೆ ಕೊಚ್ಚಿನ್ ಮತ್ತು ಮಲಬಾರ್‌ನಲ್ಲಿ ಸಿಗುವುದಕ್ಕಿಂತಲೂ ಉತ್ಕೃಷ್ಟವಾದ ಗುಣಮಟ್ಟದ ಕರಿಮೆಣಸು, ಅಕ್ಕಿ ಇತ್ಯಾದಿ ವಸ್ತುಗಳು ಕರಾವಳಿ ಕರ್ನಾಟಕದಲ್ಲಿ ಲಭ್ಯವಿದ್ದವು. ಅಲ್ಲದೇ ಇಲ್ಲಿ ಅವರಿಗೆ ಸ್ಥಳೀಯ ವ್ಯಾಪಾರಿಗಳಿಂದ ಬೆಳೆಗಳ ಖರೀದಿ ಮಾಡುವಾಗ, ಕೇರಳದ ಬಂದರು ಪ್ರದೇಶದಲ್ಲಿ ಎದುರಾದಷ್ಟು ಪೈಪೋಟಿ ಕಂಡು ಬಂದಿಲ್ಲ. ಜೊತೆಗೆ ಬೆಲೆಯೂ ಕಡಿಮೆಯಾಗಿತ್ತು.

ಗೋವಾ ಮತ್ತು ಮಧ್ಯಪ್ರಾಚ್ಯ ಪ್ರದೇಶದಲ್ಲಿರುವ ವ್ಯಾಪಾರ ಘಟಕಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಮ್ಮ ಜನರಿಗೆ ಕ್ಲಪ್ತ ಸಮಯದಲ್ಲಿ ಪೂರೈಸಬೇಕಾದ ಆಹಾರ ಸಂಪತ್ತು ಕರಾವಳಿ ಕರ್ನಾಟಕದಲ್ಲಿ ಹೇರಳವಾಗಿ ಲಭಿಸುತ್ತಿತ್ತು. ಇಲ್ಲಿಂದ ಆ ವಸ್ತುಗಳನ್ನು ರಫ್ತು ಮಾಡಲು ತಗಲುವ ಸಮಯವೂ ಕಡಿಮೆ. ಹಾಗಾಗಿ ಲಾಭದ ನಿರೀಕ್ಷೆ ಸಹಜವಾಗಿ ಹೆಚ್ಚು ಮತ್ತು ಸಾಗಾಟ ವೆಚ್ಚದಲ್ಲಿ ಕಡಿಮೆ ಹೂಡಿಕೆ.

ಈ ನಿಟ್ಟಿನಲ್ಲಿ ತಮ್ಮ ವ್ಯಾಪಾರ ವಹಿವಾಟು ಹೆಚ್ಚಿಸಿಕೊಳ್ಳಲು ಪೋರ್ಚುಗೀಸರಿಗೆ ಸವಾಲಾಗಿ ಕಂಡು ಬಂದುದು ಸ್ಥಳೀಯ ಅರಸರು. ಅವರೊಂದಿಗೆ ಚಾಣಾಕ್ಷತನದಿಂದ ಒಪ್ಪಂದ ಮಾಡಿಕೊಳ್ಳುವ ತಂತ್ರ ರೂಪಿಸಿಕೊಂಡರು. ಯುರೋಪಿನಿಂದ ತಂದ ಅತ್ಯಮೂಲ್ಯವಾದ ವಸ್ತುಗಳನ್ನು ಉಡುಗೊರೆಯಾಗಿ ಕೊಟ್ಟು ಅವರನ್ನು ಆಕರ್ಷಿಸಿಕೊಂಡರು. ತಮ್ಮ ವ್ಯಾಪಾರಕ್ಕೆ ಅನುಕೂಲಕರವಾದ ಒಪ್ಪಂದಗಳನ್ನು ಅಲ್ಲಲ್ಲಿ ಮಾಡಿಕೊಂಡರು. ಕೆಲವೊಮ್ಮೆ ಯಾವುದಕ್ಕೂ ಬಗ್ಗದ ರಾಜರ ಮೇಲೆ ಬಲಪ್ರಯೋಗ ಮಾಡಿದರು. ಇಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸ್ಥಳೀಯವಾಗಿ ದೊರೆಯುವ ಅತ್ಯಮೂಲ್ಯ ವಸ್ತುಗಳು, ಬೆಳೆಗಳು, ಯಾವುದೇ ಅಡ್ಡಿಯಿಲ್ಲದೆ, ನಿರಾತಂಕವಾಗಿ ತಮ್ಮ ಕೈ ಸೇರಬೇಕು ಎಂಬುದು ಅವರ ನಿರೀಕ್ಷೆ.

ಈ ಮೇಲಿನ ಉದ್ದೇಶಗಳನ್ನು ಈಡೇರಿಸಿಕೊಳ್ಳುವ ಸಂದರ್ಭದಲ್ಲಿ



ಮಂಗಳೂರು ಸುತ್ತಮುತ್ತ ಪೋರ್ಚುಗೀಸರು ವಿಚಿತ್ರ ರಾಜಕೀಯ ಸನ್ನಿವೇಶಗಳನ್ನು ಗುರುತಿಸಿದರು. ಇಲ್ಲಿನ ಸ್ಥಳೀಯ ಅರಸರಾದ ಬಂಗರು, ಉಳ್ಳಾಲ/ ಪುತ್ತಿಗೆಯ ಚೌಟ ಅರಸರು, ಕೆಳದಿ ನಾಯಕರು ವ್ಯಾಪಾರದ ಉದ್ದೇಶದಿಂದ ಪೋರ್ಚುಗೀಸರೊಂದಿಗೆ ಒಪ್ಪಂದ ಮಾಡಿಕೊಂಡಿದ್ದರು. ಒಪ್ಪಂದ ಮಾಡಿಕೊಳ್ಳದೇ ಇರುವ ತುಂಡರಸರ ಮೇಲೆ ಕೆಲವು ಸಂದರ್ಭಗಳಲ್ಲಿ ಬಲ ಪ್ರಯೋಗವನ್ನು ಮಾಡಿದ್ದರು. ಅರಸರಿಗೆ ಪೂರಕವಲ್ಲದ ಒಪ್ಪಂದವನ್ನು ಹೇರಿ ದುಬಾರಿ ಕಪ್ಪ ಕಾಣಿಕೆಯನ್ನು ಈ ಅರಸರಿಂದ ಪೋರ್ಚುಗೀಸರು ಪಡೆಯುತ್ತಿದ್ದರು. ಅವರನ್ನು ವಿರೋಧಿಸಿದವರನ್ನು ದಮನಿಸುವ ಕಾರ್ಯದಲ್ಲೂ ಪೋರ್ಚುಗೀಸರು ಅಲ್ಲಲ್ಲಿ ಯಶಸ್ಸನ್ನು ಕಂಡಿದ್ದರು. ದ್ವೇಷ ರಾಜಕೀಯ ಮಾಡುವ ನೆಪದಲ್ಲಿ ಕೆಲವೊಮ್ಮೆ ಸ್ಥಳೀಯ ಬಂದರುಗಳನ್ನು, ಖಾಸಗಿ ಆಸ್ತಿಪಾಸ್ತಿ ಧ್ವಂಸ ಮಾಡಿದ್ದರು. ತಮ್ಮ ಅಧೀನಕ್ಕೆ ಒಳಪಟ್ಟ ವ್ಯಾಪಾರ ನೆಲೆಗಳಲ್ಲಿ ಹೆಚ್ಚು ತೆರಿಗೆ ವಸೂಲಿ ಮಾಡಿದ್ದರು. ಈ ನಡೆಯು ಸ್ಥಳೀಯರಿಗೆ ಒಪ್ಪಿಗೆ ಆಗದಿದ್ದರೂ, ಪೋರ್ಚುಗೀಸರ ಸೈನ್ಯ ಮತ್ತು ತಂತ್ರಜ್ಞಾನದ ಬಲವು, ತುಂಡರಸರ ಆತ್ಮವಿಶ್ವಾಸವು ಕುಂದುವಂತೆ ಮಾಡಿತ್ತು. ಪೋರ್ಚುಗೀಸರು ಅತ್ಯುತ್ತಮ ಶಸ್ತ್ರಾಸ್ತ್ರಗಳನ್ನು ಹೊಂದಿದ್ದು ಸ್ಥಳೀಯರು ಒಡ್ಡುವ ಯಾವುದೇ ಬೆದರಿಕೆಗಳನ್ನು ಅವರು ಗಣನೆಗೆ ತೆಗೆದುಕೊಳ್ಳುತ್ತಿರಲಿಲ್ಲ.

ಬಹುತೇಕ ಅರಸರು ಪೋರ್ಚುಗೀಸರಿಗೆ ಕಪ್ಪ ಕೊಟ್ಟರೂ ಉಳ್ಳಾಲದ ಅಬ್ಬಕ್ಕ ರಾಣಿ ಕಪ್ಪ ನೀಡದೇ ಅವರನ್ನು ಎದುರು ಹಾಕಿಕೊಂಡಳು.

ಈ ಮಧ್ಯದಲ್ಲಿ ಉಳ್ಳಾಲ ರಾಣಿ ಅಬ್ಬಕ್ಕನ ಕಾಲದ ರಾಜಕೀಯವನ್ನು ಅಲಕ್ಷಿಸಿದರೆ ಪೋರ್ಚುಗೀಸರು ತಮ್ಮ ವ್ಯಾಪಾರ ವಹಿವಾಟು ಮುಂದುವರೆಸುವುದು ಸಾಧ್ಯವಿರುತ್ತಿರಲಿಲ್ಲ. ಬಹುತೇಕ ಸ್ಥಳೀಯ ರಾಜರು ಪೋರ್ಚುಗೀಸರಿಗೆ ಕಪ್ಪಕಾಣಿಕೆ ಕೊಡಲೊಪ್ಪಿದ್ದರೂ ಒಂದು ಹಂತದಲ್ಲಿ ರಾಣಿ ಅಬ್ಬಕ್ಕ ಕಪ್ಪಕಾಣಿಕೆ ಮತ್ತು ವ್ಯಾಪಾರ ತೆರಿಗೆಯನ್ನು ಪೋರ್ಚುಗೀಸರಿಗೆ ಕೊಡಲೊಪ್ಪಲಿಲ್ಲ. ಒಂದರ್ಥದಲ್ಲಿ ಪೋರ್ಚುಗೀಸರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿತ್ತು.

ಇಂತಹ ಪರಿಸ್ಥಿತಿಯಲ್ಲಿಯೇ ಉಳ್ಳಾಲದ ರಾಣಿ ಅಬ್ಬಕ್ಕ ಕೂಡ ಆಳ್ವಿಕೆ ಮಾಡಿದ್ದಳು. ಅವಳ ಕುರಿತು ಮಂಗಳೂರು ದರ್ಶನದಲ್ಲಿ ಉಲ್ಲೇಖವಾಗಿರುವ ಅಂಶಗಳು ಹೀಗಿವೆ:

ಮಧ್ಯಯುಗದಲ್ಲಿ ಅಂದರೆ ೧೨ನೇ ಶತಮಾನದಿಂದ ೧೮ನೇ ಶತಮಾನದ ವರೆಗೆ ಉಳ್ಳಾಲ, ಪುತ್ತಿಗೆ, ಮೂಡಬಿದರೆಯ ಚೌಟರು ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ಆಡಳಿತರಾರರಾಗಿದ್ದರು. ಚೌಟರು ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ಆಡಳಿತಗಾರರಾಗಿದ್ದರು. ಚೌಟರ ರಾಣಿಯಾದ ಅಬ್ಬಕ್ಕದೇವಿ ದಕ್ಷಿಣ ಕನ್ನಡದ ಅತ್ಯಂತ ಜನಪ್ರಿಯ ರಾಣಿಯಾಗಿದ್ದಳು. ಏಕೆಂದರೆ ಅವಳು ಪೋರ್ಚುಗೀಸರಿಗೆ ಕಪ್ಪವನ್ನು ಕೊಡಲು ಒಪ್ಪದೆ ಅವರನ್ನು ಯುದ್ಧದಲ್ಲಿ ಎದುರಿಸಿದ್ದಳು. ಯುದ್ಧದಲ್ಲಿ ಸೋಲನ್ನೊಪ್ಪಿಕೊಳ್ಳಬೇಕಾಯಿತಾದರೂ ಅವಳು ಈ ಪ್ರದೇಶದ ನಾಯಕಿಯಾಗಿ ಪ್ರಸಿದ್ಧ ವ್ಯಕ್ತಿಯಾಗಿಬಿಟ್ಟಳು. ದಕ್ಷಿಣ ಕನ್ನಡದ ಇತಿಹಾಸದಲ್ಲಿ ತನ್ನ ಹೆಸರನ್ನು ಅಜರಾಮರವಾಗಿಸಿಬಿಟ್ಟಳು. ಪೋರ್ಚುಗೀಸರು ದಕ್ಷಿಣ ಕನ್ನಡದ ಭೌಗೋಳಿಕ ರಾಜಕೀಯ ಹಾಗೂ ವ್ಯಾಪಾರೀ ಪ್ರಾಮುಖ್ಯಗಳಿಂದಾಗಿ ಇಲ್ಲಿ ತಮ್ಮ ಅಧಿಪತ್ಯವನ್ನು ಸ್ಥಾಪಿಸುವಲ್ಲಿ ಉತ್ಸಾಹಿಗಳಾಗಿದ್ದರು. ಅವರ ಎರಡು ಪ್ರಮುಖ ಉದ್ದೇಶಗಳಾದ ಉದ್ಯಮದ ಬೆಳವಣಿಗೆ ಹಾಗೂ ಕ್ರೈಸ್ತಧರ್ಮ ಪ್ರಚಾರ ಇವೆರಡಕ್ಕೂ ಇಲ್ಲಿ ವಿಪುಲವಾದ ಅವಕಾಶಗಳಿದ್ದವು. ಆದುದರಿಂದಲೇ ಇಲ್ಲಿನ ಭತ್ತ, ಸಾಂಬಾರ ಪದಾರ್ಥಗಳು, ಫಲವತ್ತಾದ ಭೂಮಿ ಇವುಗಳು ಅವರಿಗೆ ಅತಿ ಅಮೂಲ್ಯವಾಗಿದ್ದು ಅವುಗಳ ಮೇಲೆ ಅವರ ಲಕ್ಷ್ಯವಿತ್ತು.

ಪೋರ್ಚುಗೀಸ್ ವೈಸರಾಯ್ ಅಫೊನ್ಸೊ ಡೇ ಅಲ್ಬುಕರ್ಕ್‌ನ ಕಾಲದಿಂದ (೧೫೦೯–೧೫೧೫) ಮಂಗಳೂರಿಗೆ ಪೋರ್ಚುಗೀಸರ ಸಂಪರ್ಕ ಇತ್ತು. ಸಂಪರ್ಕವಷ್ಟೇ ಅಲ್ಲ. ಪೋರ್ಚುಗೀಸರು ಅನೇಕ ಬಾರಿ ದಾಳಿ ನಡೆಸಿದ ಉದಾಹರಣೆಗಳೂ ಇವೆ. ಪೋರ್ಚುಗೀಸರು ಮಂಗಳೂರು, ಹೊನ್ನೂರು, ಬಸರೂರು ಈ ಪ್ರದೇಶಗಳಲ್ಲಿ ೧೫೬೮–೬೯ರಲ್ಲಿ ಕೋಟೆಗಳನ್ನು ಕಟ್ಟಿದರು. ಅವುಗಳನ್ನು ೧೬೫೧ರಲ್ಲಿ ಶಿವಪ್ಪ ನಾಯಕ ವಶಪಡಿಸಿಕೊಳ್ಳುವವರೆಗೆ ಪೋರ್ಚುಗೀಸರು ವಿವಿಧ ಉದ್ದೇಶಗಳಿಗಾಗಿ ಬಳಸುತ್ತಿದ್ದರು. ೧೫೬೮ರಲ್ಲಿ ಪೋರ್ಚುಗೀಸರು ಮಂಗಳೂರಿನಲ್ಲಿಯೂ ಒಂದು ಕೋಟೆಯನ್ನು ಕಟ್ಟಿದರು.

ಕರಾವಳಿಯ ವಾಣಿಜ್ಯ ಕ್ಷೇತ್ರದ ಚಿತ್ರಣವು ಹೀಗಿರುವಾಗ, ಪೋರ್ಚುಗೀಸರ ಪಿತೂರಿಯನ್ನು ಸರಿಯಾಗಿ ಅರ್ಥ ಮಾಡಿಕೊಂಡು, ಅವರಿಗೆ ಸೆಡ್ಡು ಹೊಡೆದು ನಿಂತವಳು ಅಬ್ಬಕ್ಕ ರಾಣಿ.

ಆದರೆ ಈ ಅಬ್ಬಕ್ಕ ರಾಣಿ ಯಾವ ಕಾಲದಲ್ಲಿ ಆಳ್ವಿಕೆ ನಡೆಸಿದಳು ಎಂಬುದಾಗಿ ನಿಖರವಾಗಿ ಹೇಳುವುದು ಇನ್ನೂ ಸಾಧ್ಯವಾಗಿಲ್ಲ. ಇತಿಹಾಸಕಾರರ ಪ್ರಕಾರ ಮೂವರು ಅಥವಾ ನಾಲ್ವರು ಅಬ್ಬಕ್ಕ ದೇವಿಯರು ಉಳ್ಳಾಲವನ್ನು ಆಳಿದ್ದಾರೆ. ಆದರೆ ಪೋರ್ಚುಗೀಸರನ್ನು ಖಂಡತುಂಡವಾಗಿ ವಿರೋಧಿಸಿ ಅವರ ವಿರುದ್ಧ ಯುದ್ಧ ಸಾರಿದವಳು ಎರಡನೇ ಅಬ್ಬಕ್ಕ ಎಂಬ ಉಲ್ಲೇಖವಿದೆ.



ಪೋರ್ಚುಗೀಸರಿಗೆ ಕಪ್ಪ ಕೊಡಲು ನಿರಾಕರಿಸುತ್ತಿದ್ದುದರಿಂದ ಅಬ್ಬಕ್ಕ ರಾಣಿ ಮತ್ತು ಪೋರ್ಚುಗೀಸರ ನಡುವೆ ಶೀತಲ ಸಮರ ನಡೆಯುತ್ತಿತ್ತು. ೧೫೫೬ರಲ್ಲಿ ಪೋರ್ಚುಗೀಸ್, ಸೈನ್ಯಾಧಿಕಾರಿಯಾಗಿದ್ದ ಅಲ್ವಾರೊ ಡೇ ಸಿಲ್ವೇರಾ ಎಂಬವನು ಗೋವಾದಿಂದ ಅಬ್ಬಕ್ಕ ದೇವಿಯಿದ್ದ ಉಳ್ಳಾಲಕ್ಕೆ ಕಪ್ಪವನ್ನು ಸಂಗ್ರಹಿಸಿ ತರಲು ಒಂದು ಸೈನ್ಯದ ತುಕಡಿಯನ್ನು ಕಳುಹಿಸಿದನು. ಈ ಸೈನ್ಯವು ಮಂಗಳೂರನ್ನು ಲೂಟಿ ಮಾಡಿ ಅನೇಕ ಜನರ ಪ್ರಾಣ ಹಾನಿ ಮಾಡಿದ ಕತೆಗಳಿವೆ.

ಇದಾಗಿ ಎರಡು ವರ್ಷಗಳಲ್ಲಿಯೇ, ಅಂದರೆ ೧೫೫೮ರಲ್ಲಿ ಪೋರ್ಚುಗೀಸರು ಮಲಬಾರ್ ಪ್ರದೇಶದ ಅಧಿಕಾರವನ್ನು ಲೂಯಿಸ್ ಡೇ ಮೆಲೊ ಎಂಬುವವನಿಗೆ ವಹಿಸಿಕೊಟ್ಟರು. ಅದೇ ವರ್ಷ ಅವನು ಮಂಗಳೂರಿನ ಬಂದರಿನಲ್ಲಿ ಕ್ಯಾನನೂರ್ (ಕಣ್ಣಾನೂರು) ದೊರೆಯ ಹಡಗನ್ನು ಕಂಡ ತಕ್ಷಣವೇ ಅದಕ್ಕೆ ಮುತ್ತಿಗೆ ಹಾಕಿದನು. ಆದರೆ ಮಂಗಳೂರಿನವರ ಸಹಕಾರದಿಂದ ರಾಣಿ ಅಬ್ಬಕ್ಕ ದೇವಿ ಆ ಮುತ್ತಿಗೆಯನ್ನು ಹತ್ತಿಕ್ಕಿದಳು. ಲೂಯಿಸ್ ಡೆ ಮೆಲ್ಲೋ ಈ ವರ್ತನೆಗೆ ಕೋಪಗೊಂಡು, ನಗರಕ್ಕೆ ಬೆಂಕಿ ಹಾಕಿ, ಸಿಕ್ಕವರನ್ನು ಕೊಂದು ಜಯಭೇರಿಯ ಮೆರವಣಿಗೆಯೊಂದಿಗೆ ಹಿಂದಿರುಗಿದನು. ಇದನ್ನೆಲ್ಲ ಗಮನಿಸುತ್ತಲೇ ಇದ್ದ ಅಬ್ಬಕ್ಕ ರಾಣಿ, ಸ್ವಲ್ಪ ವರ್ಷಗಳ ನಂತರ ಪೋರ್ಚುಗೀಸರಿಗೆ ಕಪ್ಪ ಕೊಡುವುದನ್ನು ಪುನಃ ನಿಲ್ಲಿಸಿ ಬಿಟ್ಟಳು.

೧೫೬೭ರ ಸೆಪ್ಟೆಂಬರ್ ತಿಂಗಳಲ್ಲಿ ಪೋರ್ಚುಗೀಸರ ವೈಸರಾಯಿಯು ಒಂದು ಉಪಾಯ ಮಾಡಿದನು. ಮುಂದಿನ ಬಾರಿ ತಾನು ಮುತ್ತಿಗೆ ಹಾಕುವ ವೇಳೆಗೆ ರಾಣಿಗೆ ಸಹಾಯ ಮಾಡಲು ಸೇನೆಗೆ ಸಾಧ್ಯವಾಗದಂತೆ ಮಾಡಲು, ಅಂದರೆ ಸೇನೆಯನ್ನು ಆದಷ್ಟು ದಣಿವಾಗುವಂತೆ ಮಾಡಲು, ಪೆಕ್ಸೆಟೊ ಎಂಬ ಸೈನ್ಯಾಧಿಕಾರಿಯನ್ನು ಒಂದು ಸೈನ್ಯದ ತುಕಡಿಯೊಂದಿಗೆ ಕಳುಹಿಸಿ ಕೊಟ್ಟನು. ಅಷ್ಟೇ ಅಲ್ಲ, ಇನ್ನೊಂದು ಕಡೆಯಿಂದ ತಾನೇ ನಗರಕ್ಕೆ ಮುತ್ತಿಗೆ ಹಾಕಿ ಅರಮನೆಯನ್ನು ಪ್ರವೇಶಿಸಿಬಿಟ್ಟನು. ರಾಣಿಯ ಸಹಾಯಕರು ತಕ್ಷಣವೇ ಪೋರ್ಚುಗೀಸರ ಸೇನೆಯನ್ನು ಎದುರಿಸಿ ಪೆಕ್ಸೆಟೊ ಸೇರಿದಂತೆ ಎಪ್ಪತ್ತು ಜನರನ್ನು

ಕೊಂದುಹಾಕಿದರು. ಉಳಿದವರು ಉಳಿಗಾಲವಿಲ್ಲವೆಂದರಿತು ತಕ್ಷಣವೇ ತಮ್ಮ ಹಡಗನ್ನು ಸೇರಿಕೊಂಡರು. ಈ ಅವಮಾನಕರವಾದ ಸೋಲಿನ ಹಿನ್ನೆಲೆಯಲ್ಲೇ ಪೋರ್ಚುಗೀಸರ ವೈಸರಾಯಿಯು, ಅಬ್ಬಕ್ಕಳ ಶರಣಾಗತಿಗೆ ಹೆಚ್ಚಿನ ಸೈನಿಕರನ್ನು ಕಳುಹಿಸಲು ನಿರ್ಧರಿಸಿದನು. ೧೫೬೮ರ ಜನವರಿ ೪ರಂದು ಪೋರ್ಚುಗೀಸರು ಅಬ್ಬಕ್ಕಳ ಶರಣಾಗತಿಗಾಗಿ ತಮ್ಮ ಸೈನ್ಯವನ್ನು ಕಳುಹಿಸಿ ಯುದ್ಧ ಮಾಡಿದರು. ಉಳ್ಳಾಲದ ಸೈನ್ಯ ದಿಟ್ಟತನದಿಂದ ತಿರುಗೇಟು ನೀಡಿತು. ಆದರೆ ಪೋರ್ಚುಗೀಸರ ಸೈನ್ಯ ಅಬ್ಬಕ್ಕಳ ಸೈನ್ಯಕ್ಕಿಂತ ಶಕ್ತಿಯುತವಾಗಿತ್ತು. ಪೋರ್ಚುಗೀಸರು ಯಶಸ್ವಿಯಾದರು. ಹೀಗೆ ಶರಣಾದ ಬಳಿಕ ಅವರಿಗೆ ಕಪ್ಪ ಕೊಡುತ್ತ, ಮುಂದಿನ ದಿನಗಳಲ್ಲಿ ಅವರನ್ನು ಹೇಗೆ ಮಣಿಸಬೇಕು ಎಂಬ ತಯಾರಿಗಳನ್ನು ಅಬ್ಬಕ್ಕದೇವಿ ಮಾಡುತ್ತಿದ್ದಳು.

ಇದಾದ ನಂತರ ವೈಸರಾಯಿಯು ಮಂಗಳೂರಿನ ದಕ್ಷಿಣ ದ್ವಾರದ ನದಿ ದಂಡೆಯಲ್ಲಿ ಕೋಟೆಯನ್ನು ಕಟ್ಟಲು ಭೂ ಪರೀಕ್ಷೆ ಮಾಡಿದನು. ಇದು ತೆರಿಗೆ ನೀಡದಿರುವುದನ್ನು ವಿರೋಧಿಸುವುದಷ್ಟೇ ಅಲ್ಲದೆ, ಪೋರ್ಚುಗೀಸರ ಶತ್ರುಗಳಿಗೆ ಮಲಬಾರದಲ್ಲಿ ಸಹಾಯ ಮಾಡುತ್ತಿದ್ದ ಅಬ್ಬಕ್ಕಳನ್ನು ಹತ್ತಿಕ್ಕಲು ಒಳ್ಳೆಯ ದಾರಿಯಾಗಿತ್ತು. ಉಳ್ಳಾಲದಲ್ಲಿ ಕೋಟೆ ಕಟ್ಟಲು ಅವನಿಗೆ ಅಷ್ಟು ಪ್ರಶಸ್ತವಾದ ಜಾಗ ಕಾಣಲಿಲ್ಲ. ಹಾಗಾಗಿ ಅವನು ಮಂಗಳೂರಿನ ಉತ್ತರದತ್ತ ಮುಖ ಮಾಡಿ, ೧೫೬೮ರಲ್ಲಿ ಬಂಗರ ದೊರೆಯ ಸಹಾಯದಿಂದ ಅಲ್ಲಿಯೇ ಒಂದು ಕೋಟೆಯನ್ನು ಕಟ್ಟಿದನು.

ಇಲ್ಲಿ ಅಬ್ಬಕ್ಕ ದೇವಿಯ ವೈವಾಹಿಕ ಜೀವನದ ಕುರಿತು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಬೇಕು. ಚೌಟ ಮನೆತನದ ಅಬ್ಬಕ್ಕ ರಾಣಿಯನ್ನು ಬಂಗರಸ ದೊರೆ ಲಕ್ಷ್ಮಪ್ಪ ಬಂಗರಸನಿಗೆ ಮದುವೆ ಮಾಡಿಕೊಡಲಾಗಿತ್ತು.

ಹಾಗಿದ್ದರೆ ಚೌಟ ಮನೆತನದ ಕುರಿತು ಒಂದೆರಡು ವಿಚಾರಗಳನ್ನು ಇಲ್ಲಿ ಅರಿಯೋಣ.

❑

## ಅಬ್ಬಕ್ಕನ ಚೌಟ ಅರಸು ಮನೆತನ

೧೪ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಉದಯವಾಗುವುದಕ್ಕೆ ಮುನ್ನ, ಸ್ವತಂತ್ರವಾಗಿ ಆಡಳಿತ ಮಾಡುತ್ತಿದ್ದ ತುಳುನಾಡಿನ ಅರಸು ಮನೆತನಗಳು ಈ ಜಿಲ್ಲೆಗೆ ಯುರೋಪಿಯನ್ನರು ಬರುವ ವರೆಗೆ ತಮ್ಮ ಆದಿ ರಾಜರಿಗೆ ಕಪ್ಪ ಕಾಣಿಕೆಯನ್ನು ಸಲ್ಲಿಸುತ್ತಿದ್ದರು. ತುಳುನಾಡಿನಲ್ಲಿ ಜನ್ಮತಾಳಿ ಐತಿಹಾಸಿಕ ಸಾಧನೆಗೈದ ಕೆಲವು ಆಯ್ದ ಅರಸು ಮನೆತನಗಳಲ್ಲಿ ಚೌಟ ಅರಸು ಮನೆತನವು ಕೂಡಾ ಒಂದು. ಇಲ್ಲಿನ ಇತಿಹಾಸದಲ್ಲಿ ಪ್ರಥಮ ಬಾರಿಗೆ ಈ ನಾಡನ್ನು ಆಕ್ರಮಿಸಿದ, ಆ ದಿನಗಳಲ್ಲಿ ಯುರೋಪಿನಲ್ಲಿ ಪ್ರಬಲ ಶಕ್ತಿಯಾಗಿದ್ದ ಪೋರ್ಚುಗೀಸರನ್ನು ಹೊರದಬ್ಬಿ ತುಳುನಾಡನ್ನು ಸ್ವತಂತ್ರಗೊಳಿಸುವ ಅಪರೂಪದ ಸಾಹಸಕ್ಕೆ ಕೈ ಹಚ್ಚಿದ ಹಿರಿಮೆಯ 'ಚೌಟ ಅರಸು' ಮನೆತನಕ್ಕೆ ಸಲ್ಲುತ್ತದೆ.

'ಚೌಟ' ಅರಸು ಕುಟುಂಬದಲ್ಲಿ ರಾಜಕೀಯ ಇತಿಹಾಸವನ್ನು ಗಮನಿಸಿದಾಗ ೧೨ನೇ ಶತಮಾನದಲ್ಲಿ ಚೌಟ ರಾಜ್ಯವನ್ನು ಉಳ್ಳಾಲ ಸೋಮೇಶ್ವರವನ್ನು ಕೇಂದ್ರೀಕರಿಸಿ ಸ್ಥಾಪನೆ ಮಾಡಿದವರು, ಮೊದಲನೆ ತಿರುಮಲರಾಯ. ನಂತರ ಈ ವಂಶದಲ್ಲಿಯ ೧ನೇ ಅಬ್ಬಕ್ಕ ದೇವಿ (ಕ್ರಿ.ಶ ೧೨೮೩–೧೩೧೬)ರವರೆಗೆ ಆಳ್ವಿಕೆ ನಡೆಸಿದರು. ಅಬ್ಬಕ್ಕ ರಾಣಿ ಒಬ್ಬಳಲ್ಲ ಎಂಬ ಚರ್ಚೆ ದೀರ್ಘವಾದದ್ದು. ಅಬ್ಬಕ್ಕ ರಾಣಿಯರ ಸಂಖ್ಯೆ ಮೂರೋ ನಾಲ್ಕೋ ಎಂಬ ಸಂದೇಹ ಇದೆ. ಪೋರ್ಚುಗೀಸರನ್ನು ಹಿಮ್ಮೆಟ್ಟಿಸಿದ ಅಬ್ಬಕ್ಕ ರಾಣಿಯ ಕತೆ ಪೋರ್ಚುಗಲ್‌ನಲ್ಲಿಯೂ ಪ್ರಸಿದ್ಧವಾಗಿರುತ್ತದೆ. ಆ ಕತೆಯನ್ನು ಕೇಳಿ ಅಲ್ಲಿಂದ ಯಾತ್ರಿಕ ಪಿಯಾತ್ರೆ ದೆಲ್ಲಾವೆಲ್ಲೆ ಭಾರತಕ್ಕೆ ಬಂದು ತುಳುನಾಡಿಗೂ ಬರುತ್ತಾನೆ. ಹೋರಾಟ ನಡೆಸಿದ ರಾಣಿ ಎರಡನೇ ಅಬ್ಬಕ್ಕ ದೇವಿ ಆಗಿರಬಹುದು ಎಂಬುದಾಗಿ ಇತಿಹಾಸಕಾರರ ಊಹೆಯೊಂದಿದೆ.

'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ' ಎಂಬ ಕೃತಿಯನ್ನು

ರಚಿಸಿದ ಮಂಜೇಶ್ವರ ಗಣಪತಿ ರಾವ್ ಐಗಳ ಇಲ್ಲಿಯ ರಾಜಮನೆತನಗಳನ್ನು ಉಲ್ಲೇಖಿಸುವಾಗ ಚೌಟ ಅರಸರ ಬಗೆಗೆ ವಿವರವಾಗಿ ದಾಖಲುಮಾಡಿದ್ದಾರೆ. ಚೌಟ ಅರಸರು ಪುತ್ತಿಗೆ ಮತ್ತು ಮೂಡುಬಿದಿರೆಗಳನ್ನು ರಾಜಧಾನಿಯಾಗಿ ಮಾಡುವುದಕ್ಕಿಂತ ಮೊದಲು ಉಳ್ಳಾಲವನ್ನು ರಾಜಧಾನಿಯಾನ್ನಾಗಿ ಆಳುತ್ತಿದ್ದರು. ಅವರ ಪ್ರಕಾರ ಚೌಟ ಅರಸು ಮನೆತನದಲ್ಲಿ ಮೂರು ಮಂದಿ ಅಬ್ಬಕ್ಕ ದೇವಿಯರು ಇದ್ದರು ಎಂದು ಉಲ್ಲೇಖಿಸುತ್ತಾರೆ. (ಪುಟ ಸಂ. ೧೪೯ ರಿಂದ ೨೦೪) ೧ನೇ ಅಬ್ಬಕ್ಕ ದೇವಿ ಕ್ರಿ.ಶ. ೧೨೩೮ ರಿಂದ ೧೩೧೬ ರವರೆಗೆ ಪಟ್ಟಕ್ಕೆ ಬಂದು ಆಡಳಿತವನ್ನು ನಡೆಸಿದಳು. ಎರಡನೇ ಅಬ್ಬಕ್ಕ ದೇವಿ ಕ್ರಿ.ಶ. ೧೫೪೪ರಿಂದ ೧೫೮೨ ಪಟ್ಟಕ್ಕೆ ಬಂದು ರಾಜ್ಯಭಾರ ಮಾಡಿದಳು. ಈಕೆಯು ಪೋರ್ಚುಗೀಸರೊಂದಿಗೆ ದೀರ್ಘವಾಗಿ ಹೋರಾಟ ನಡೆಸಿದ್ದಾಳೆ. ಈ ಮೂರನೇ ಅಬ್ಬಕ್ಕ ದೇವಿ ಕ್ರಿ.ಶ. ೧೭೨೬–೧೭೪೯ ರವರೆಗೆ ರಾಜ್ಯಭಾರ ಮಾಡಿದ್ದಳು. ಅಬ್ಬಕ್ಕ ರಾಣಿಯ ಸಂಖ್ಯೆಯ ವಿಚಾರದಲ್ಲಿ ಇನ್ನು ಸಂದೇಹ ಪರಿಹಾರವಾಗಿಲ್ಲ. ಅಬ್ಬಕ್ಕಳ ಬಗ್ಗೆ ಇನ್ನಷ್ಟು ಸಂಶೋಧನೆಗಳು ನಡೆಯಬೇಕಾದ ಅವಶ್ಯಕತೆಯಿದೆ ಎನ್ನುತ್ತಾರೆ ಐಗಳು.

ಪೋರ್ಚುಗೀಸರನ್ನು ಸೋಲಿಸಿದ ಅಬ್ಬಕ್ಕ ೧೫೪೪–೧೫೮೨ ರವರೆಗೆ ಆಳಿದವಳು. ಪ್ರವಾಸಿ ತಾನು ಕಂಡ ಹೆಣ್ಣನ್ನು 'ನಲವತ್ತು ವರ್ಷ ವಯಸ್ಸಿನ ಗಡಸಿನ ಹೆಣ್ಣು' ಎಂದು ಕರೆಯುವುದು ತೀರಾ ಅಸಂಭವ. ಎರಡನೇ ಅಬ್ಬಕ್ಕ ದೇವಿಯ ನಂತರ ಪಟ್ಟಕ್ಕೆ ಬಂದ ತಿರುಮಲಾದೇವಿಯೂ ೧೫೮೨ ರಿಂದ ೧೬೦೬ ರವರೆಗೆ ಪಟ್ಟದಲ್ಲಿದ್ದಳು. ತಿರುಮಾಲಾದೇವಿಯನ್ನು ಕಂಡು ಪಿಯತ್ರೊ ಮಾತಾಡಿದನೆಂದರೆ ಅದೂ ಆಗಲಿಕ್ಕಿಲ್ಲ. ಏಕೆಂದರೆ ಅವಳು ಮೋಸಕ್ಕೆ ಬಲಿಯಾಗಿದ್ದಳು. ಈ ಕಾರಣಗಳಿಂದ ಪಿಯತ್ರೋ ಕಂಡನೆಂದು ಹೇಳುವ ಅಬ್ಬಕ್ಕ ರೋಚಕ ಯುದ್ಧವನ್ನು ನಡೆಸಿದ ಪ್ರಸಿದ್ಧ ಅಬ್ಬಕ್ಕನಲ್ಲ ಎಂದು ಸ್ಪಷ್ಟವಾಗುತ್ತದೆ. ಆಕೆ ಆ ಕಾಲದಲ್ಲಿ ಉಳ್ಳಾಲವನ್ನು ಆಳಿದ ರಾಜನಾದ ಚಂದ್ರಶೇಖರ ಚಿಕ್ಕರಾಯನ ತಾಯಿಯಾಗಿರಬಹುದೇ? ಇದ್ದರೂ ಇರಬಹುದು. ಈ ವಿಷಯದ ಬಗೆಗೆ ಇನ್ನಷ್ಟು ಸಂಶೋಧನೆಯಾಗಬೇಕಿದೆ ಎಂದು ಎಚ್.ಎಲ್. ನಾಗೇಗೌಡರು ಅಡಿಟಿಪ್ಪಣಿಯಲ್ಲಿ ಉಲ್ಲೇಖಿಸುತ್ತಾರೆ. (ಪುಟಸಂಖ್ಯೆ ೨೫೬)

ಡಾ.ವೈ.ಉಮಾನಾಥ ಶೆಣೈಯವರು 'ಅಬ್ಬಕ್ಕ ರಾಣಿಯ ಸ್ಮಾರಕಗಳು ಕೋಟೆ ಕೊತ್ತಲಗಳು ಮತ್ತು ಶಾಸನಗಳು' ಎಂಬ ಲೇಖನದಲ್ಲಿ ಉಳ್ಳಾಲದ



ಶ್ರೀ ಆದಿನಾಥೇಶ್ವರ ಪಾರ್ಶ್ವನಾಥ ಬಸದಿಯ ಬಗ್ಗೆ ಉಲ್ಲೇಖಿಸುತ್ತಾ ಒಂದು ಬಸದಿಯ ಮೂಲ ಗರ್ಭಗೃಹದಲ್ಲಿ ಶ್ರೀ ಆದಿನಾಥ ತೀರ್ಥಂಕರ ಮತ್ತು ಶ್ರೀ ಪಾರ್ಶ್ವನಾಥ ತೀರ್ಥಂಕರರು ಎರಡು ಮೂಲ ನಾಯಕರನ್ನು ಪೂಜಿಸುವ ಕ್ರಮವಿಲ್ಲ ಎನ್ನುತ್ತಾರೆ. ಆಡಳಿತ ನಿಪುಣೆಯಾದ ಅಬ್ಬಕ್ಕ ತನ್ನ ತವರಿನ ಮನೆದೇವರು ಪಾರ್ಶ್ವನಾಥನನ್ನು ಬಂಗಾಡಿಯ ಬಂಗರಸನ ಮನೆದೇವರಾದ ಆದಿನಾಥನನ್ನು ಒಂದೇ ಗರ್ಭಗೃಹದಲ್ಲಿಟ್ಟು ಪರಸ್ಪರ ಮೈತ್ರಿಯ ಕಾರಣಕ್ಕೆ ಪೂಜಿಸಲು ಆರಂಭಿಸಿರಬೇಕು ಎನ್ನುತ್ತಾರೆ. ಕ್ರಿ.ಶ. ೧೫೫೪ ರಿಂದ ೧೫೮೪ ರವರೆಗೆ ಉಳ್ಳಾಲದಿಂದ ಆಳಿದ ಹಿರಿಯ ಅಬ್ಬಕ್ಕ ದೇವಿ ಮತ್ತು ಕ್ರಿ.ಶ. ೧೫೯೪ರಿಂದ ಕ್ರಿ.ಶ ೧೬೪೦ ರವರೆಗೆ ಆಳಿದ ಕಿರಿಯ ಅಬ್ಬಕ್ಕ ದೇವಿ ಇಬ್ಬರೂ ಬಂಗಾಡಿಯ ಬಂಗರಸರನ್ನೇ ವಿವಾಹವಾಗಿದ್ದುದರಿಂದ ಈ ಪ್ರತಿಷ್ಠಾಪನೆ ಮತ್ತು ಆರಾಧನೆ ಇವರ ಪೈಕಿ ಯಾರಾದರೂ ಒಬ್ಬರಿಂದ ಆರಂಭವಾಗಿರಬೇಕು ಎನ್ನುತ್ತಾರೆ. ಈ ಇಬ್ಬರು ರಾಣಿಯರು ಪೋರ್ಚುಗೀಸರೊಂದಿಗೆ ಯುದ್ಧ ಮಾಡಿದ ದಾಖಲೆಗಳು ಪೋರ್ಚುಗೀಸರು ಬರೆದ ಪತ್ರಗಳ ದಾಖಲೆಗಳಲ್ಲಿದೆ. ಈ ಬಗ್ಗೆ ಇನ್ನು ಅಧ್ಯಯನಗಳು ಆಗಬೇಕಿವೆ.

ಡಾ.ಕೆ.ಜಿ.ವಸಂತಮಾಧವರು ಉಳ್ಳಾಲದ ಅಬ್ಬಕ್ಕ ದೇವಿಯವರ ಸಂಖ್ಯೆ ೪ ಎನ್ನುತ್ತಾರೆ. ಅಬ್ಬಕ್ಕ ರಾಣಿಯರ ಬಗೆಗಿನ ಇತಿಹಾಸ ವಿದ್ವಾಂಸರು ಅಲಕ್ಷಿಸಿರಲು ಕಾರಣ ಅವರ ಬಗೆಗೆ ಸಿಕ್ಕಿದ ಮಾಹಿತಿಗಳ ಗೊಂದಲಮಯವಾಗಿದೆ ಎನ್ನುತ್ತಾರೆ. ಚೌಟ ಅರಸು ಮನೆತನದ ಈ ರಾಣಿಯರು ಉಳ್ಳಾಲವನ್ನು ಕೇಂದ್ರವಾಗಿಟ್ಟುಕೊಂಡು ೯೦ ವರುಷಗಳ ಕಾಲ ಆಳಿದರು. ತುಳುನಾಡಿನ ಪ್ರಮುಖ ಅರಸು ಮನೆತನಗಳಲ್ಲಿ ಒಂದಾಗಿ ಪಟ್ಟಕ್ಕೆ ಬರುವುದು ಮಾತೃಮೂಲ ಪರಂಪರೆಯ ಅಳಿಯ ಸಂತಾನ ಪದ್ಧತಿಯಲ್ಲಿ ಅಬ್ಬಕ್ಕ ದೇವಿಯರ ತಂದೆಯ ಹೆಸರುಗಳು ಎಲ್ಲೂ ಉಲ್ಲೇಖವಿಲ್ಲದಿದ್ದು ಐತಿಹಾಸಿಕ ವಿಶ್ಲೇಷಣೆಗೆ ತೊಡಕಾಗಿದೆ ಎನ್ನುತ್ತಾರೆ.

ಇವರ ಚರಿತ್ರೆಯನ್ನು ತಿಳಿಯಲು ಲಭಿಸಿರುವ ಐತಿಹಾಸಿಕ ದಾಖಲೆಗಳಲ್ಲಿ ಹೆಚ್ಚಿನವುಗಳು ವಿದೇಶಿಯರ ಬರಹಗಳು. ಪೋರ್ಚುಗೀಸರ ದಾಖಲೆ ಪತ್ರಗಳು ಹಾಗೂ ಪ್ರವಾಸಿಗರ ವರದಿಗಳು. ಇವು ಪೋರ್ಚುಗೀಸ್ ಇಟಾಲಿಯನ್ ಮತ್ತು ಡಚ್ ಭಾಷೆಗಳ ಬರಹಗಳು. ವಿದೇಶಿ ಬರಹಗಳ ಪ್ರಾಬಲ್ಯ ಎದ್ದು ಕಾಣುವ ಅಬ್ಬಕ್ಕ ದೇವಿಯರ ಬಗೆಗೆ ಕೆಲವು ಸ್ಥಳೀಯ ದಾಖಲೆಗಳು ಇತ್ತೀಚೆಗೆ

ಲಭಿಸಿವೆ. ಕ್ರಿ.ಶ. ೧೫೫೪ರಿಂದ ೧೫೮೪ರವರೆಗೆ ಆಳಿದ ಹಿರಿಯ ಅಬ್ಬಕ್ಕದೇವಿಯ ಕುರಿತಾಗಿ ಎರಡು ತಾಮ್ರ ಶಾಸನಗಳು ಪತ್ತೆಯಾಗಿದೆ. ಈ ಶಾಸನಗಳ ಕಾಲವು ಕ್ರಿ.ಶ. ೧೫೬೧ ಮತ್ತು ೧೫೬೪ ಎಂದು ನಿರ್ಧರಿಸಲಾಗಿದೆ. ಈ ತಾಮ್ರ ಶಾಸನಗಳಲ್ಲಿ ಹಿರಿಯ ಅಬ್ಬಕ್ಕ ದೇವಿಯ ಬಗ್ಗೆ ಕುತೂಹಲಕಾರಿಯಾದ ಹೊಸ ಮಾಹಿತಿಗಳು ಲಭ್ಯವಾಗಿವೆ. ಕ್ರಿ.ಶ. ೧೫೯೫ ರಿಂದ ೧೬೪೦ ರವರೆಗೆ ಆಳಿದ್ದ ಕಿರಿಯ ಅಬ್ಬಕ್ಕ ದೇವಿಯ ಕುರಿತಾಗಿ ಯಾವ ಸ್ಥಳೀಯ ದಾಖಲೆಗಳೂ ಲಭಿಸಿಲ್ಲ. ಇವಳು ಪೋರ್ಚುಗೀಸರೊಂದಿಗೆ ಪತ್ರ ವ್ಯವಹಾರಗಳನ್ನು ನಡೆಸಿದ್ದಳೆಂದು ಪೋರ್ಚುಗೀಸ್ ದಾಖಲೆಗಳಿಂದ ಲಭಿಸಿದ್ದರೂ ಅವು ಇನ್ನೂ ಲಭ್ಯವಾಗಿಲ್ಲ. ಸ್ಥಳೀಯ ದಾಖಲೆಗಳ ಅಭಾವ ವಿದೇಶಿ ಆಕರಗಳ ಪ್ರಭಾವ ಅಬ್ಬಕ್ಕಳ ಅಧ್ಯಯನಕ್ಕೆ ಹಿನ್ನಡೆಯಾಗಿದೆ.

ಕೆ.ಜಿ.ವಸಂತ ಮಾಧವರು ನಾಲ್ಕು ಮಂದಿ ಅಬ್ಬಕ್ಕ ರಾಣಿಯರನ್ನು ಗುರುತಿಸಿದ್ದು ಗಣಪತಿ ರಾವ್ ಐಗಳು ಅವರು ಮೂವರನ್ನು ಗುರುತಿಸಿದ್ದಾರೆ. ತಾಮ್ರ ಶಾಸನ ಹಾಗೂ ವಿದೇಶಿ ಬರಹಗಳನ್ನು ಆಧಾರವಾಗಿಟ್ಟುಕೊಂಡು ಕಿರಿಯ ಅಬ್ಬಕ್ಕ ರಾಣಿಯ ಕಾಲ ೧೫೯೫ ರಿಂದ ೧೬೪೦ ಎಂದು ಉಲ್ಲೇಖಿಸುತ್ತಾರೆ. ಈ ಮೇಲಿನ ಇಬ್ಬರು ಇತಿಹಾಸಕಾರರ ಬರಹಗಳನ್ನು ಗಮನಿಸುವಾಗ, ಕ್ರಿ.ಶ. ೧೫೯೦ರಿಂದ ೧೬೪೦ರವರೆಗೆ ಆಳಿದ ಕಿರಿಯ ಅಬ್ಬಕ್ಕ ರಾಣಿಯೇ ಪಿಯತ್ರೊ ಕಂಡ ಅಬ್ಬಕ್ಕಳ ಕಾಲಕ್ಕೆ ಸಮೀಪವಾಗುತ್ತಾಳೆ. ಹೊಸ ಹೊಸ ಶೋಧಗಳು ಐತಿಹಾಸಿಕ ಖಚಿತತೆಯನ್ನು ನೀಡುತ್ತವೆ.

ಸಮಕಾಲೀನ ವಿದೇಶಿ ಪ್ರವಾಸಿಗಳಲ್ಲಿ ಫ್ರಾನ್ಸಿಸ್‌ಕೊ ಡಿ'ಸೋಜಾ (Francisco D'Souza) ಡಚ್ ಪ್ರವಾಸಿ ಲಿನಿ ಕೊಸ್ಟೆನ್ (Linichosten) ಫ್ರೆಂಚ್ ಪ್ರವಾಸಿ ಪೈರಾರಡ್ (Pyrard) ಮತ್ತು ಇಟಲಿಯ ಪಿಯತ್ರೊ ದೆಲ್ಲೆವೆಲ್ಲೆ ಪ್ರಮುಖರು. ಸಮಕಾಲೀನ ದಾಖಲೆಗಳನ್ನು ಅಭ್ಯಸಿಸದುದರಿಂದ ಕೆಲವು ಪ್ರವಾಸಿಗರ ವರದಿಯೂ ಪೂರ್ವಗ್ರಹಪೀಡಿತವಾದುದಾಗಿದೆ. ಈ ಬಗೆಗೆ ಸುದೀರ್ಘ ಚರ್ಚೆ ನಡೆಸುವ ಡಾ.ಕೆ.ಜಿ.ವಸಂತಮಾಧವರು ಅಬ್ಬಕ್ಕದೇವಿ ಮತ್ತು ಬಂಗರಸರ ಸಂಬಂಧ, ವೈವಾಹಿಕ ನಂಟು, ಶಾಸನಗಳು ವಿದೇಶಿ ಬರಹಗಳ ವಿವರಗಳನ್ನು ಚರ್ಚಿಸಿ ಅಬ್ಬಕ್ಕದೇವಿಯವರ ಆಳ್ವಿಕೆಯ ಕಾಲಾನುಕ್ರಮಣಿಕೆ ಮತ್ತು ಇದರ ಪರಿಹಾರಕ್ಕಾಗಿ ಇರುವ ತೊಡಕುಗಳನ್ನು ವಿಶ್ಲೇಷಿಸಿ ಸಂಖ್ಯೆ ನಾಲ್ಕು ಎಂದು ಅಂತಿಮಗೊಳಿಸಿದ್ದಾರೆ. ಈ ಬಗೆಗೂ ಇನ್ನು ಚರ್ಚೆಗಳಿವೆ.



ಡಾ.ಇಂದಿರಾ ಹೆಗ್ಗಡೆಯವರು, ತುಳುನಾಡಿನ ವಿಶೇಷತೆಯೆಂದರೆ ಪಟ್ಟಾಭಿಷೇಕ ಮಾಡಿಕೊಂಡವರಿಗೆ ಪಟ್ಟದ ಪರಂಪರೆಯ ಹೆಸರನ್ನು ನೀಡಲಾಗುತ್ತದೆ. ತುಳುವಿನಲ್ಲಿ ಇದನ್ನು ಪುಟ್ಟುಪುದರ್ ದೆಪ್ಪುವೆ, ಪಟ್ಟದ ಪುದರ್ ಪಾಡುವೆ (ಹುಟ್ಟಿನ ಹೆಸರು ತೆಗೆಯುವೆ, ಪಟ್ಟದ ಹೆಸರು ಹಾಕುವೆ) ಎಂದು ಹೇಳುತ್ತಾರೆ. ಚೌಟ ಅರಸು ಮನೆತನದ ಪರಂಪರೆಯಂತೆ ಮಹಿಳೆಗೆ ಪಟ್ಟಾಭಿಷೇಕವಾದರೆ 'ಅಬ್ಬಕ್ಕ' ಎಂಬ ಹೆಸರಿನಿಂದ ಗುರುತಿಸಿಕೊಳ್ಳುತ್ತಾಳೆ ಎಂದು 'ಇತಿಹಾಸ ದರ್ಶನ' ಕೃತಿಯಲ್ಲಿ ತಿಳಿಸಿದ್ದಾರೆ. ಈ ಬಗ್ಗೆ ಅಳುಪರ ಶಾಸನದಲ್ಲಿಯೂ ಉಲ್ಲೇಖವಿದೆ.

ತಾವು ಕ್ಷೇತ್ರಕಾರ್ಯ ಮಾಡಿದಾಗ ಸಿಕ್ಕ ಮಾಹಿತಿಯನ್ವಯ ಚೌಟ ಮನೆತನದಲ್ಲಿ 'ಅಬ್ಬಕ್ಕ' ಎನ್ನುವುದು ಪಟ್ಟದಹೆಸರು ಎಂಬ ಉಲ್ಲೇಖವನ್ನು ನೀಡುತ್ತಾರೆ. ಈ ಅಂಶವನ್ನು ಗಮನದಲ್ಲಿ ಇರಿಸಿಕೊಳ್ಳಬೇಕು. ಅಷ್ಟು ಮಾತ್ರವಲ್ಲ ಕುಟುಂಬಗಳಲ್ಲಿ ಅಜ್ಜನ/ಅಜ್ಜಿಯ ಹೆಸರನ್ನು ಮೊಮ್ಮಗ/ಮೊಮ್ಮಗಳಿಗೆ ಇಡುವ ಪರಿಪಾಠವೂ ತುಳುನಾಡಿನಲ್ಲಿದೆ.

## ಪೋರ್ಚುಗೀಸರೊಡನೆ ಸೆಣಸಿದ ಅಬ್ಬಕ್ಕ ದೇವಿಯ ಜನಜನಿತ ಕತೆ

'ಅಬ್ಬಕ್ಕ ಸಂಕಥನ'ದಲ್ಲಿ ಡಾ. ಪೀಟರ್ ವಿಲ್ಸನ್ ಪ್ರಭಾಕರ್ ಹೀಗೆ ಬರೆಯುತ್ತಾರೆ (೨೦೧೧, ಪುಟ ೧೯೫): 'ಚೌಟರಸರಲ್ಲಿ ಅತ್ಯಂತ ಪ್ರಮುಖಳಾದವಳು ರಾಣಿ ಅಬ್ಬಕ್ಕ ದೇವಿ. ಬಾಲ್ಯದಲ್ಲಿ ಆಕೆ ಮೂಡಬಿದಿರೆಯಲ್ಲಿ ತನ್ನ ಮಾವ ತಿರುಮಲರಾಯನ ಆಶ್ರಯದಲ್ಲಿ ಬೆಳೆದವಳು. ತಿರುಮಲರಾಯನ ಆಳ್ವಿಕೆಯ ಕಾಲದ ಹೊತ್ತಿಗೆ ಚೌಟರು ತಮ್ಮ ರಾಜಧಾನಿಯನ್ನು ಮೂಡಬಿದಿರೆಗೆ ವರ್ಗಾಯಿಸಿದ್ದರು. ಆದರೂ ಉಳ್ಳಾಲ ಮತ್ತು ಪುತ್ತಿಗೆಯಲ್ಲಿಯೂ ಅರಮನೆಗಳಿದ್ದು ಅಲ್ಲಿಂಯೇ ಆಡಳಿತಕ್ಕೆ ಅಗತ್ಯವಿರುವ ಪೂರಕ ವ್ಯವಸ್ಥೆಯನ್ನು ಮಾಡಿಕೊಂಡಿದ್ದರು.ಬಾಲಕಿ ಅಬ್ಬಕ್ಕ ದೇವಿಯಲ್ಲಿದ್ದ ಗುಣಗಳನ್ನು ಕಂಡು ಆಕೆಗೆ ಸಾಹಿತ್ಯ, ಸಂಗೀತ, ಕಲೆಗಳೊಂದಿಗೆ ರಾಜಧರ್ಮ ಮತ್ತು ಯುದ್ಧವಿದ್ಯೆಯನ್ನು ಕಲಿಸುವ ಎಲ್ಲಾ ಏರ್ಪಾಡುಗಳನ್ನು ತಿರುಮಲರಾಯ (ಅಬ್ಬಕ್ಕಳ ಸೋದರಮಾವ) ಮಾಡಿದ್ದ. ಆಕೆಯ ವಿವಾಹದ ಬಗೆಗೆ ಎಚ್ಚರಿಕೆಯ ಕಣ್ಣಿಂದ ಗಮನಿಸಿದ್ದರು. ಆ ಕಾಲಕ್ಕೆ ಮಂಗಳೂರಿನ ಹೆಚ್ಚಿನ ಪ್ರದೇಶಗಳು ನಂದಾವರ ಬಂಗರಸನ ಕೈ ಕೆಳಗಿದ್ದುದರಿಂದ ಅವನ ಅಳಿಯ ಲಕ್ಷ್ಮಪ್ಪ ಬಂಗರಸರೊಡನೆ ಅಬ್ಬಕ್ಕ ದೇವಿಯ ವಿವಾಹ ನಡೆಸಿದರೆ ಆಗ ಸಮುದ್ರ ಮೂಲಕ ಹೆಚ್ಚುತ್ತಿದ್ದ ಹಡಗುಗಳ್ಳರನ್ನು

ಅಡಗಿಸುವುದು ಸುಲಭವಾದೀತೆಂದು ಲೆಕ್ಕ ಹಾಕಿದರು. ಅದರಂತೆ ಅಬ್ಬಕ್ಕ ದೇವಿಗೂ ಮಂಗಳೂರಿನ ಲಕ್ಷ್ಮಪ್ಪ ಬಂಗರಸನಿಗೂ ವಿವಾಹವಾಯಿತು. ಮದುವೆಯ ನಂತರ ಅಬ್ಬಕ್ಕ ದೇವಿ, ತನ್ನ ತವರಿನ ಅಧೀನದಲ್ಲಿದ್ದ ಉಳ್ಳಾಲ ರಾಜ್ಯದ ರಾಣಿಯಾದಳು. ಅಲ್ಲದೇ ಶಾಲಿವಾಹನ ಶಕ ೧೪೬೬ನೇ ಕ್ರೋಧಿ ಸಂವತ್ಸರದ ಪಾಲ್ಗುಣ ಶುದ್ಧ ೧೧ ರಂದು (ಕ್ರಿ.ಶ. ೧೫೪೪) ಆಕೆಗೆ ಪಟ್ಟವಾಯಿತು. ಮುಂದೆ ಆಕೆ ಉಳ್ಳಾಲದಲ್ಲಿದ್ದುಕೊಂಡೇ ಆಡಳಿತವನ್ನು ನೋಡಿಕೊಂಡಳು. ಲಕ್ಷ್ಮಪ್ಪ ಬಂಗರಸನು ಆಕೆಗೆ ಎಲ್ಲಾ ರೀತಿಯ ನೆರವನ್ನು ನೀಡುತ್ತಿದ್ದ. ಆದರೆ ಈ ಮಧ್ಯೆ ಲಕ್ಷ್ಮಪ್ಪನ ಅಳಿಯ (ಸೋದರಿಯ ಮಗ) ರಾಮರಾಯನು ಅಬ್ಬಕ್ಕನ ವಿರುದ್ಧ ದ್ವೇಷ ಸಾಧಿಸಿ ಇಡೀ ರಾಜ್ಯವನ್ನು ತನ್ನ ಕೈವಶ ಮಾಡಲು ಪೋರ್ಚುಗೀಸರೊಂದಿಗೆ ಸೇರಿಕೊಂಡು ಒಪ್ಪಂದವೊಂದನ್ನು ಮಾಡಿಕೊಳ್ಳುತ್ತಾನೆ.

ಆ ಹೊತ್ತಿಗೆ ಪೋರ್ಚುಗೀಸರು ಕರಾವಳಿ ಕರ್ನಾಟಕದ ಮೇಲಿನ ಎಲ್ಲಾ ವ್ಯಾಪಾರ ವಹಿವಾಟುಗಳ ಮೇಲಿನ ಹಕ್ಕಿಗಾಗಿ ಕಾಮರಾಯನೊಂದಿಗೆ ಒಪ್ಪಂದವೊಂದನ್ನು (ಕ್ರಿ.ಶ. ೧೫೪೭) ಮಾಡಿಕೊಂಡಿದ್ದರು. ಆದರೆ ಕರಾವಳಿಯ ಯಾವುದೇ ಅರಸರು, ಸಾಮಂತರು ಪೋರ್ಚುಗೀಸರಿಗೆ ಕಪ್ಪಕಾಣಿಕೆಯನ್ನು ಸಲ್ಲಿಸುತ್ತಿರಲಿಲ್ಲ. ಅದಕ್ಕೆ ಪ್ರತೀಕಾರ ರೂಪದಲ್ಲಿ ಪೋರ್ಚುಗೀಸರು ಉಳ್ಳಾಲ, ಮಂಗಳೂರು ಮತ್ತು ಬಾರ್ಕೂರುಗಳ ಮೇಲೆ ದಾಳಿ ಮಾಡಿ ಬೆಂಕಿ ಹಾಕಿ ನಾಶ ಮಾಡುವ ಕಾರ್ಯದಲ್ಲಿ ತೊಡಗಿದ್ದರು. ಇದಕ್ಕೆ ಹೆದರಿದ ಲಕ್ಷ್ಮಪ್ಪ ಬಂಗರಸನು ಪೋರ್ಚುಗೀಸರಿಗೆ ಕಪ್ಪ ಪಾವತಿಸುತ್ತಿದ್ದ. ಆದರೆ ಸ್ವಾಭಿಮಾನಿಯಾಗಿದ್ದ ಅಬ್ಬಕ್ಕ ಇದನ್ನು ನಿಲ್ಲಿಸಬೇಕೆಂದು ತನ್ನ ಪತಿಗೆ ತಿಳಿಸಿದಾಗ, ಅದಕ್ಕೆ ಆತನು ಒಪ್ಪಿ ಪೋರ್ಚುಗೀಸರಿಗೆ ಮಂಗಳೂರು ಸಂಸ್ಥಾನದಿಂದ ಕೊಡುತ್ತಿದ್ದ ಸುಂಕ ೨೪೦೦ ಮುಡಿ ಅಕ್ಕಿ ೧೦೦೦ ಬುದ್ಧಲಿ ಎಣ್ಣೆಯನ್ನು ನಿಲ್ಲಿಸಿಬಿಟ್ಟನು.

ಇದನ್ನು ತಿಳಿದ ಪೋರ್ಚುಗೀಸರು ಉಳ್ಳಾಲದ ಮೇಲೆ ದಾಳಿ ಮಾಡಲು ಸಿದ್ಧತೆ ಮಾಡುತ್ತಿರುವಾಗ ಲಕ್ಷ್ಮಪ್ಪ ಬಂಗರಸನ ಅಳಿಯನಾದ ಕಾಮರಾಯನು ತನ್ನ ಅತ್ತೆ ಮಾವಂದಿರ ವಿರುದ್ಧ ಪಿತೂರಿ ಮಾಡಿ ಪೋರ್ಚುಗೀಸರೊಂದಿಗೆ ಸೇರಿಕೊಂಡು ಮಂಗಳೂರಿನ ಮೇಲೆ ಅವರ ದಾಳಿಗೆ ವೇದಿಕೆ ಸಿದ್ಧ ಪಡಿಸಿದನು.

ಯಾವುದೇ ದಾರಿಯಲ್ಲಾದರೂ ಅಧಿಕಾರ ಹಿಡಿದೇ ತೀರಬೇಕೆಂಬ ಹಠದಲ್ಲಿದ್ದ ಕಾಮರಾಯನು ಇಷ್ಟಕ್ಕೆ ತನ್ನ ನಾಡದ್ರೋಹದ ಕಾರ್ಯವನ್ನು



ನಿಲ್ಲಿಸಲಿಲ್ಲ. ಅಬ್ಬಕ್ಕ ದೇವಿ ಮತ್ತು ಲಕ್ಷ್ಮಪ್ಪ ಬಂಗರಸರು ಜೊತೆಯಾಗಿದ್ದರೆ, ಇಬ್ಬರೂ ಸೇರಿ ಪೋರ್ಚುಗೀಸರ ವಿರುದ್ಧ ತಿರುಗಿ ಬೀಳುವುದು ಖಚಿತ ಎಂಬುದು ಕಾಮರಾಯನಿಗೆ ಗೊತ್ತಿತ್ತು. ಹೇಗಾದರೂ ಮಾಡಿ ಸ್ವಾಭಿಮಾನಿ ಅಬ್ಬಕ್ಕ ದೇವಿಯನ್ನು ಲಕ್ಷ್ಮಪ್ಪ ಬಂಗರಸನಿಂದ ದೂರ ಮಾಡಲು ಯತ್ನಿಸಿದ.

ಸಾಧ್ಯವಾದಾಗಲೆಲ್ಲ, ಅಬ್ಬಕ್ಕ ದೇವಿಯನ್ನು ಉಳ್ಳಾಲಕ್ಕೆ ಕಳುಹಿಸುವಂತೆ ಮಾವನಿಗೆ ಹೇಳುತ್ತಿದ್ದನು. ಲಕ್ಷ್ಮಪ್ಪ ಬಂಗರಸನು ಸುಂಕಕ್ಕೆ ಸಂಬಂಧಿಸಿದಂತೆ, ಪ್ರಜೆಗಳ ಅಭಿಪ್ರಾಯ ಕೇಳಿದ. ಕಾಮರಾಯನ ಪಿತೂರಿಯಿಂದಾಗಿ ಅವರೆಲ್ಲರೂ ಕೂಡಾ ಪೋರ್ಚುಗೀಸರಿಗೆ ಸುಂಕ ನಿಲ್ಲಿಸಿದ ಲಕ್ಷ್ಮಪ್ಪ ಬಂಗರಸರ ಧೀರನಿರ್ಧಾರವನ್ನು ವಿರೋಧಿಸಿದರು. ಒಟ್ಟಿನಲ್ಲಿ ಈ ಘಟನೆಯಿಂದಾಗಿ ಪತಿ–ಪತ್ನಿಯರಲ್ಲಿ ವಿರಸವಾಗಿ ಅಬ್ಬಕ್ಕದೇವಿಯು ತನ್ನ ಪತಿ ಲಕ್ಷ್ಮಪ್ಪ ಬಂಗರಸರನ್ನು ತ್ಯಜಿಸಿ ಉಳ್ಳಾಲದ ಅರಮನೆಗೆ ಹೋದಳು. ಈ ಘಟನೆ ಘಟಿಸಿದ ಕೆಲವೇ ಸಮಯದಲ್ಲಿ ಅಳಿಯನೊಂದಿಗೆ ಸೇರಿದ ಲಕ್ಷ್ಮಪ್ಪ ಬಂಗರಸನು, ಅಬ್ಬಕ್ಕನ ಮಾತನ್ನು ಮೀರಿ ಪೋರ್ಚುಗೀಸರಿಗೆ ಮತ್ತೆ ಸುಂಕ ಕೊಡಲು ಆರಂಭಿಸಿದ. ಇದರಿಂದ ಮತ್ತಷ್ಟು ಕೆರಳಿದ ಅಬ್ಬಕ್ಕ ದೇವಿಯು ಪೋರ್ಚುಗೀಸರ ವಿರುದ್ಧ ಹೋರಾಡಲು ದಿಟ್ಟ ನಿರ್ಧಾರ ತಳೆದಳು. ಅಲ್ಲದೆ ಅದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳತೊಡಗಿದಳು. ಕೆಳದಿಯ ವೆಂಕಟಪ್ಪ ನಾಯಕನಿಂದ ಅಗತ್ಯದ ಸಹಾಯ ಪಡೆದಳು. (ಈ ಘಟನೆಯ ನಂತರ ಲಕ್ಷ್ಮಪ್ಪ ಬಂಗರಸನು ಹೆಚ್ಚುಕಾಲ ಬಾಳಲಿಲ್ಲ. ಕ್ರಿ.ಶ. ೧೫೫೬ರಲ್ಲಿ ಬೈಲಂಗಡಿಯಲ್ಲಿ ವೇಣೂರಿನ ಅಜಿಲರೊಂದಿಗೆ ನಡೆದ ಯುದ್ಧದಲ್ಲಿ ಪ್ರಾಣ ಕಳಕೊಂಡನು.)' (ಪುಟ ೧೯೯, ೨೦೧೧, ಅಬ್ಬಕ್ಕ ಸಂಕಥನ)

### ವೈಯಕ್ತಿಕ ನೋವುಗಳು ಅಬ್ಬಕ್ಕಳನ್ನು ಗಟ್ಟಿಗೊಳಿಸಿದವು:

ಈ ಎಲ್ಲಾ ಘಟನೆಗಳು ಪೋರ್ಚುಗೀಸರ ವಿರುದ್ಧದ ಹೋರಾಟದಲ್ಲಿ ಅಬ್ಬಕ್ಕನ ಮನಸ್ಥಿತಿಯನ್ನು ಮತ್ತಷ್ಟು ಗಟ್ಟಿಗೊಳಿಸಿದವು. ದಶಕಗಳ ಕಾಲ ಮಂಗಳೂರು ಉಳ್ಳಾಲ ಸುತ್ತಮುತ್ತಲಿನ ಪ್ರದೇಶದ ಮೇಲೆ ಪೋರ್ಚುಗೀಸರ ಆಕ್ರಮಣವನ್ನು ತಡೆಗಟ್ಟಲು ಧೀರಳಾಗಿ ಹೋರಾಡಲು ಸಹಾಯಕವಾದವು.

ಕ್ರಿ.ಶ. ೧೫೫೫ರಲ್ಲಿ ಪೋರ್ಚುಗೀಸ್ ನೌಕಾಧಿಪತಿ ಡೊವೆಲ್ ಅಲ್ವಾರಿಸ್ ಡಿ.ಸಿಲ್ವಿರನು ೨೧ ಹಡಗುಗಳೊಂದಿಗೆ ಉಳ್ಳಾಲದ ಮೇಲೆ ದಾಳಿ ಮಾಡಿದ್ದ.

ಆದರೆ ಆಗ ಕಲ್ಲಿಕೋಟೆಯ ಝಮೋರಿನನು ಮಧ್ಯಸ್ಥಿಕೆ ವಹಿಸಿ ಅಬ್ಬಕ್ಕ ಮತ್ತು ಪೋರ್ಚುಗೀಸ್ ಅಧಿಕಾರಿಗಳ ಮಧ್ಯೆ ಒಪ್ಪಂದವೊಂದು ಏರ್ಪಡುವಂತೆ ಪ್ರಯತ್ನಿಸಿದ. ಒಪ್ಪಂದವೇರ್ಪಟ್ಟ ಮಾತ್ರಕ್ಕೆ ಎಲ್ಲವೂ ತಣ್ಣಗಾಗಲಿಲ್ಲ. ೧೫೫೮ರಲ್ಲಿ ಆಕೆ ಮತ್ತೊಂದು ಬಾರಿ ಪೋರ್ಚುಗೀಸರೊಂದಿಗೆ ಹೋರಾಡಬೇಕಾಯಿತು. ಆ ವರ್ಷ ಕಣ್ಣೂರಿನ ಅರಸನ ಹಡಗೊಂದನ್ನು ಪೋರ್ಚುಗೀಸ್ ಸೇನಾಧಿಪತಿ ಲೂಯಿಸ್ ಡೆಮೆಲ್ಲೋ ವಶಪಡಿಸಲು ಪ್ರಯತ್ನಿಸಿದಾಗ ಅಬ್ಬಕ್ಕ ಪೋರ್ಚುಗೀಸರಿಗೆ ವಿರೋಧವಾಗಿ ಹೋರಾಡಲು ಕಣ್ಣೂರಿನ ಅರಸನಿಗೆ ಸಹಾಯ ಮಾಡಿದಳು. ಎರಡೂ ಕಡೆಯ ಸೇನೆಗಳು ಒಂದಾಗಿ ಹೋರಾಡಿದ್ದರಿಂದ, ಅಸಹಾಯಕನಾದ ಲೂಯಿಸ್ ಡೆಮೆಲ್ಲೊ ಮಂಗಳೂರಿಗೆ ಬೆಂಕಿಯಿಟ್ಟು ಸುಟ್ಟುಹಾಕಿ, ಸಿಟ್ಟಿನಿಂದ ಹಿಂತಿರುಗಿದ್ದ.

ಈ ಘಟನೆಯ ನಂತರ ಕೆಲವು ವರ್ಷಕಾಲ ಅಬ್ಬಕ್ಕ ಮತ್ತು ಪೋರ್ಚುಗೀಸರ ನಡುವೆ ಕದನವೇನೂ ಏರ್ಪಡಲಿಲ್ಲ. ಆದರೆ ಅವರಿಗೆ ಕೊಡುವ ಕಪ್ಪವನ್ನು ಅಬ್ಬಕ್ಕ ನಿಲ್ಲಿಸಿಬಿಟ್ಟಿದ್ದರಿಂದ ಉಳ್ಳಾಲದ ಮೇಲೆ ದಾಳಿ ಮಾಡಲು ಪೋರ್ಚುಗೀಸರು ಹೊಂಚು ಹಾಕುತ್ತಿದ್ದರು. ಹೋರಾಟಕ್ಕೆ ಸರಿಯಾದ ರೂಪುರೇಷೆಯನ್ನು ಹಾಕಿದ ಪೋರ್ಚುಗೀಸ್ ವೈಸರಾಯಿ ಕ್ರಿ.ಶ.೧೫೬೬ರಲ್ಲಿ ಜೋಪೀಕ್ಸೋಟೊ ಎಂಬ ಅಧಿಕಾರಿಯನ್ನು ಕಳುಹಿಸಿಕೊಡುತ್ತಾನೆ. ಉಳ್ಳಾಲಕ್ಕೆ ಮುತ್ತಿಗೆಹಾಕಿದ ಪೋರ್ಚುಗೀಸರಿಗೆ ಆರಂಭದಲ್ಲಿ ಜಯ ಲಭಿಸಿದರೂ ಕೊನೆಯಲ್ಲಿ ಜೋ ಪಿಕ್ಸೋಟೊ ಕೊಲ್ಲಲ್ಪಟ್ಟು ಪೋರ್ಚುಗೀಸರಿಗೆ ಪರಾಜಯವಾಯಿತು. ಈ ಘಟನೆಯಿಂದ ಮತ್ತಷ್ಟು ಕುಪಿತಗೊಂಡ ಪೋರ್ಚುಗೀಸ್ ವೈಸರಾಯ್ ಡೊಮ್ ಇಂಟಾವೊ ಡಿ ನೊರೊನ್ಹಾ ತಾನೇ ಯುದ್ಧರಂಗಕ್ಕೆ ಇಳಿಯಲು ನಿರ್ಧರಿಸಿದ.

ಏಳು ಯುದ್ಧ ನೌಕೆಗಳು ಮತ್ತು ೨೭ ದೋಣಿಗಳಲ್ಲಿ ೩೦೦ ಯೋಧರ ಸಹಿತ ಗೋವಾದಿಂದ ಹೊರಟು ಸೆಪ್ಟೆಂಬರ್ ೧೫೬೭ರಲ್ಲಿ ಮಂಗಳೂರಿನ ಮೇಲೆ ದಾಳಿ ಮಾಡುತ್ತಾನೆ. ಆ ಹೊತ್ತಿಗೆ ೧೨,೦೦೦ ಯೋಧರು ಮಂಗಳೂರನ್ನು ಕಾಯುತ್ತಿದ್ದರು. ಪೋರ್ಚುಗೀಸರು ಮಂಗಳೂರಿಗೆ ದಾಳಿ ಮಾಡಿದ ರಾತ್ರಿಯೇ ಅಬ್ಬಕ್ಕ ತನ್ನ ೨೦೦೦ ಸೈನಿಕರ ಬಲದಿಂದ ಪೋರ್ಚುಗೀಸ್ ಸೈನ್ಯವನ್ನು ಹಿಮ್ಮೆಟ್ಟಿಸಿದಳು. ಈ ಕದನದಲ್ಲಿ ಪೋರ್ಚುಗೀಸರ ದಂಡನಾಯಕ ಡಾನ್ ಫ್ರಾನ್ಸಿಸ್ ಮಸ್ಕರೇಂಞ್ಞಸ್‌ನು ತೀವ್ರವಾಗಿ ಗಾಯಗೊಂಡನು. ಇದೊಂದು



ದೀರ್ಘವಾದ ಮತ್ತು ಘೋರವಾದ ಯುದ್ಧವಾಗಿತ್ತು. ಅಬ್ಬಕ್ಕನ ಸಾಹಸ ಶೌರ್ಯವನ್ನು ಕಂಡ ಜನರು, ಪೋರ್ಚುಗೀಸರು ದಿಗ್ಭ್ರಮೆಗೊಂಡರು. ಪೋರ್ಚುಗೀಸರ ವಿರುದ್ಧ ಅಬ್ಬಕ್ಕದೇವಿ ಪಡೆದ ಈ ವಿಜಯ ಹೊರದೇಶಗಳಲ್ಲಿ ಬಹಳಷ್ಟು ಸುದ್ದಿ ಮಾಡಿತು.

ಆದರೆ ಈ ವಿಜಯವು ಪೋರ್ಚುಗೀಸರ ಸಿಟ್ಟನ್ನು ಮತ್ತಷ್ಟು ಬಡಿದೆಬ್ಬಿಸಿತು. ಮತ್ತೆ ಹೋರಾಡಿ ಉಳ್ಳಾಲವನ್ನು ಮಣಿಸಬೇಕು ಎಂದು ಅವರು ಪ್ರತಿಜ್ಞೆಯನ್ನೇ ಮಾಡಿದ್ದರು.

ಮಂಗಳೂರು ಬಂದರನ್ನು ಹಿಡಿಯಲೇಬೇಕೆಂದು ಪಣತೊಟ್ಟಿದ್ದ ಪೋರ್ಚುಗೀಸ್ ವೈಸರಾಯ್ ಕ್ರಿ.ಶ. ೧೫೬೮ರ ಜನವರಿ ೨೧ ರಂದು ಮತ್ತೆ ಹೊರಟನು. ಅವರ ದಂಡನಾಯಕನಾಗಿದ್ದ ಡೋಮ್ ಅಂತೋನಿಯೊ ಡಿ'ಪಿರೇರಾನ ನಾಯಕತ್ವದಲ್ಲಿ ೫೦೦ ಜನರ ಯೋಧರು ಹೋರಾಟಕ್ಕೆ ಸನ್ನದ್ಧರಾಗಿದ್ದರು. ಅವರೆಲ್ಲರೂ ಮಂಗಳೂರು ನಗರವನ್ನು ವಶಪಡಿಸಿಕೊಂಡು ಅದಕ್ಕೆ ಬೆಂಕಿ ಕೊಟ್ಟು ಸುಟ್ಟು ಹಾಕಿದರು. ಇತ್ತ ಪದೇ ಪದೇ ಎದುರಾಗುತ್ತಿದ್ದ ಯುದ್ಧದಿಂದ ಸೈನಿಕರು ದಣಿದಿದ್ದರು. ಒಂದೇ ವರ್ಷದಲ್ಲಿ ಎದುರಾದ ಮತ್ತೊಂದು ಯುದ್ಧದಲ್ಲಿ ಗೆಲ್ಲುವುದು ಸುಲಭವಾಗಿರಲಿಲ್ಲ. ಈ ಯುದ್ಧದಲ್ಲಿ ಅಬ್ಬಕ್ಕ ಸೋಲು ಒಪ್ಪಿಕೊಳ್ಳಬೇಕಾಯಿತು. ಅಲ್ಲದೇ ಒಳನಾಡಿಗೆ ಓಡಿಹೋಗಬೇಕಾದ ಅನಿವಾರ್ಯತೆ ಎದುರಾಯಿತು. ಯುದ್ಧದಲ್ಲಿ ಸೋತ ಅಬ್ಬಕ್ಕ ಬಹಳ ಕಪ್ಪವನ್ನು ಪೋರ್ಚುಗೀಸರಿಗೆ ಪಾವತಿಸಬೇಕಾಯಿತು. ಈ ಯುದ್ಧದ ನಂತರ ನೇತ್ರಾವತಿ ನದಿಯ ಉತ್ತರದಂಡೆಯಲ್ಲೊಂದು ಕೋಟೆಯನ್ನು ಪೋರ್ಚುಗೀಸರು ನಿರ್ಮಿಸಿದರು. ಆದರೆ ಸ್ವಲ್ಪ ಕಾಲದಲ್ಲಿಯೇ ಅಬ್ಬಕ್ಕ ಮತ್ತೆ ಹಿಂತಿರುಗಿದಳು. ವಿದೇಶೀ ಶಕ್ತಿಗಳಿಗೆ ಕಪ್ಪ ಕೊಡುತ್ತ ಕಾಲ ಕಳೆಯುವುದು ಆಕೆಯ ಮನಸ್ಸಿಗೆ ಒಪ್ಪುವ ವಿಚಾರವಾಗಿರಲಿಲ್ಲ. ಪೋರ್ಚುಗೀಸರೊಡನೆ ಮತ್ತೊಂದು ನಿರ್ಣಾಯಕ ಹೋರಾಟಕ್ಕೆ ಅಣಿಯಾದಳು.

## ನಿರ್ಣಾಯಕ ಹೋರಾಟ

ಈ ಹೋರಾಟದಲ್ಲಿ ಆಕೆ ಸುತ್ತಮುತ್ತಲಿನ ಹಲವು ಅರಸರ ನೆರವನ್ನು ಪಡೆದಳು. ಮುಖ್ಯವಾಗಿ ಬಿಜಾಪುರದ ಆದಿಲ್‌ಶಾಹ ಮತ್ತು ಕಲ್ಲಿಕೋಟೆಯ ಝಮೋರಿನ ದೊರೆಯೊಂದಿಗೆ ಒಪ್ಪಂದ ಮಾಡಿಕೊಂಡಳು. ಅವಳ ಈ

ಹೋರಾಟದಲ್ಲಿ ಕೆಳದಿಯ ಅರಸ ವೆಂಕಟಪ್ಪನಾಯಕನು ಅಬ್ಬಕ್ಕನಿಗೆ ಸಹಾಯ ನೀಡಿದ್ದಾನೆ. ಆದರೆ ಮುಲ್ಕಿ ಕಾರ್ನಾಡಿನ ರಾಣಿ, ಅಬ್ಬಕ್ಕನ ವಿರುದ್ಧ ಅಂದರೆ ಪೋರ್ಚುಗೀಸರ ಪರ ನಿಂತಳು. ಕ್ರಿ.ಶ. ೧೫೮೧ರಲ್ಲಿಆರಂಭಗೊಂಡ ಈ ಸಂಘರ್ಷದ ಆರಂಭದಲ್ಲಿ ಝುಮೋರಿನ್ ರಾಜನ ದಳಪತಿ ಕುಟ್ಟಿಪ್ಪೋಕರ್ ಮತ್ತು ಅವನ ಸೈನಿಕರು  ಮಂಗಳೂರಿಗೆ ಬಂದು ಕೋಟೆಯೊಳಗೆ ಪ್ರವೇಶಿಸಿ ಪೋರ್ಚುಗೀಸರ ವಿರುದ್ಧ ಹೋರಾಟ ಆರಂಭಿಸಿದರು. ಆದರೆ ಸಕಾಲದಲ್ಲಿ ಎಚ್ಚೆತ್ತ ಪೋರ್ಚುಗೀಸರು, ಕುಟ್ಟಿಪ್ಪೋಕರ್‌ನ ಈ ಪ್ರಯತ್ನವನ್ನು ವಿಫಲಗೊಳಿಸಿದರು.

ಇದನ್ನು ತಿಳಿದ ಅಬ್ಬಕ್ಕ ಪೋರ್ಚುಗೀಸರನ್ನು ಎದುರಿಸಲು ಇನ್ನಷ್ಟು ಸುಸಜ್ಜಿತವಾದ ಸಿದ್ಧತೆಗಳನ್ನು ಮಾಡಿದಳು. ಕ್ರಿ.ಶ ೧೫೮೧ರ ಕೊನೆ ವೇಳೆಗೆ ೨೦೦೦ ಸೈನಿಕರೊಂದಿಗೆ ಪೋರ್ಚುಗೀಸರು ಉಳ್ಳಾಲದ ಮೇಲೆ ದಾಳಿ ಮಾಡಿ ಅಲ್ಲಿಯೇ ಕಾಡುಕಡಿದು ಉಳ್ಳಾಲವನ್ನು ಸುಟ್ಟು ಹಾಕಿದರು. ಮುಂದೆ ಉಳ್ಳಾಲದಲ್ಲಿ ನಡೆದ ಯುದ್ಧದಲ್ಲಿ ಅಬ್ಬಕ್ಕ ಮತ್ತು ಆಕೆಯ ಸೈನ್ಯ ಪೋರ್ಚುಗೀಸರ ವಿರುದ್ಧ ಶಕ್ತಿ ಮೀರಿ ಕಾದಾಡಿತು. ಆದರೆ ಭಾರೀ ತಯಾರಿಯೊಂದಿಗೆ ಬಂದಿದ್ದ ಪೋರ್ಚುಗೀಸ್ ಸೈನ್ಯ, ಉಳ್ಳಾಲದಲ್ಲಿ ಅಪಾರ ಹಾನಿ ಮಾಡಿತು. ಅಂತಿಮವಾಗಿ ಅಬ್ಬಕ್ಕ ಸೋಲೊಪ್ಪಿಕೊಳ್ಳಬೇಕಾಯಿತು. ರಣರಂಗದಲ್ಲಿ ಗಾಯಗೊಂಡ ಅಬ್ಬಕ್ಕ ದೇವಿಯು ಕ್ರಿ.ಶ. ೧೫೮೨ರಲ್ಲಿ ಮರಣ ಹೊಂದಿದಳು. ಪೋರ್ಚುಗೀಸರ ವಿರುದ್ಧದ ಎರಡು ದಶಕಗಳ ಕಾಲ ನಿರಂತರವೆಂಬಂತೆ ಹೋರಾಡಿದ ಆಕೆ ಕೊನೆಗೂ ಸ್ವಾಭಿಮಾನಿಯಾಗಿ ಮಡಿದಳು.

ಕದನದಲ್ಲಿ ಪೋರ್ಚುಗೀಸ್ ಸೈನ್ಯದ ನಾಯಕತ್ವ ವಹಿಸಿದವರು ದಂಡನಾಯಕ ಡಾನ್ ಜುವಾನ್ ಕುಟಿನ್ಹೊ ಮತ್ತು ಹಡಗಿನ ಕ್ಯಾಪ್ಟನ್ ಫ್ರಾನ್ಸಿಸ್ ಡಿಮಿರಿಂಡಾ. ಅಬ್ಬಕ್ಕನ ಮರಣ ನಂತರ ಇವರಿಬ್ಬರ ಕೈ ಕೆಳಗಿದ್ದ ಪೋರ್ಚುಗೀಸ್ ಸೇನೆಯು ಮಂಗಳೂರು ಮತ್ತು ಉಳ್ಳಾಲವನ್ನು ದೋಚಿ ನಂತರ ಸುಟ್ಟು ಹಾಕಿತು.

## ಆತ್ಮವಿಶ್ವಾಸ ಪ್ರತೀಕವೆನಿಸಿದ್ದ ರಾಣಿ

ಅಬ್ಬಕ್ಕ ದೇವಿ ಅತ್ಯಂತ ಚಿಕ್ಕ ರಾಜ್ಯದ ರಾಣಿಯಾಗಿದ್ದಳು. ಕ್ರಿ.ಶ ೧೫ರಿಂದ ೧೮ನೇ ಶತಮಾನದಲ್ಲಿ ಯುರೋಪ್ ಖಂಡದಲ್ಲಿ ಅತ್ಯಂತ ಒಂದು ಶಕ್ತಿಶಾಲಿ



ನೌಕಾಬಲವನ್ನು ಹೊಂದಿದ ಪೋರ್ಚುಗೀಸ್ ಪಡೆಯನ್ನು ಸೋಲಿಸಿ ಒಂದು ಸ್ವತಂತ್ರ ಉಳ್ಳಾಲ ರಾಜ್ಯವನ್ನು ಸ್ಥಾಪಿಸುವಲ್ಲಿ ಸಫಲಳಾಗಿದ್ದಳು. ಜನರ ಮನಸ್ಸಿನಲ್ಲಿ ಅಬ್ಬಕ್ಕನ ಸಾಹಸ ಶೌರ್ಯದ ಕತೆಗಳು ಇಂದಿಗೂ ಮಾಸಿ ಹೋಗಿಲ್ಲ. ಮೂರು ದಶಕಗಳ ಆಕೆಯ ಆಳ್ವಿಕೆಯ ಕಾಲದಲ್ಲಿ ಆಕೆ  ತೋರಿದ ಶೌರ್ಯ, ಸಾಹಸ ಮತ್ತು ದೇಶಭಕ್ತಿಗಾಗಿ ಅವಳನ್ನು ಝಾನ್ಸಿರಾಣಿ ಲಕ್ಷ್ಮೀಬಾಯಿ ಮತ್ತು ಕಿತ್ತೂರು ಚೆನ್ನಮ್ಮನೊಂದಿಗೆ ಹೋಲಿಸಲಾಗಿದೆ. ಅಬ್ಬಕ್ಕ ದೇವಿಯ ಸಾಹಸ ಕಾರ್ಯವನ್ನು ಕೇಳಿ ತಿಳಿದುಕೊಂಡ ಇಟೆಲಿಯ ಪ್ರವಾಸಿಗ ಪಿಯಾತ್ರೋ ದೆಲ್ಲಾವೆಲ್ಲೆ ಅವಳನ್ನು ಭೇಟಿ ಮಾಡಿ ಉಳ್ಳಾಲ ರಾಜ್ಯದ ವೈಭವವನ್ನು ಕಣ್ಣಾರೆ ಕಾಣುವುದಕ್ಕಾಗಿಯೇ ಬಂದಿದ್ದ. ತನ್ನ ಪ್ರವಾಸಿ ಕಥನದಲ್ಲಿ ಅಬ್ಬಕ್ಕದೇವಿ ಮತ್ತು ಉಳ್ಳಾಲದ ರಾಜ್ಯದ ಬಗ್ಗೆ ಬಹಳಷ್ಟು ವಿವರಣೆ ನೀಡಿದ್ದಾನೆ.

ಲಭ್ಯವಿರುವ ಮೌಖಿಕ ಮಾಹಿತಿಯ ಪ್ರಕಾರ, ಲಕ್ಷ್ಮಪ್ಪ ಬಂಗರಸ ಮತ್ತು ಅಬ್ಬಕ್ಕ ದೇವಿಗೆ ವೈವಾಹಿಕ ಸಂಬಂಧದಲ್ಲಿ ಬಿರುಕು ಕಾಣಿಸುತ್ತದೆ. ಆಗ ಬಂಗರಸರು ತನ್ನ ಅಳಿಯನ ಸಹಾಯದಿಂದ ಆಕೆಯನ್ನು ಅಪಹರಿಸಿ ದೋಣಿಯಲ್ಲಿ ಇರಿಸುತ್ತಾರೆ. ಅಬ್ಬಕ್ಕ ರಾಣಿ, ಚಾಕಚಕ್ಯತೆಯಿಂದ ತಪ್ಪಿಸಿಕೊಂಡು ಉಳ್ಳಾಲಕ್ಕೆ ಮರಳುತ್ತಾಳೆ. ಮರಳಿ ಬಂದವಳು ಬಂಗರಸರು ವಿವಾಹ ಸಂದರ್ಭದಲ್ಲಿ ನೀಡಿದ ಒಡವೆಗಳನ್ನು ಮರಳಿ ಕಳುಹಿಸುತ್ತಾಳೆ. ಅಲ್ಲಿಗೆ, ಅವರ ವೈವಾಹಿಕ ಸಂಬಂಧ ಮುರಿದು ಬೀಳುತ್ತದೆ. ಇದೇ ಲಕ್ಷ್ಮಪ್ಪ ಬಂಗರಸ ಬೈಲಂಗಡಿ ಮೂಲರ ರಾಜಕುಮಾರಿಯನ್ನು ವಿವಾಹವಾಗುತ್ತಾನೆ.

## ವಿದೇಶಿ ಪ್ರವಾಸಿ ದೆಲ್ಲಾವೆಲ್ಲೆ ಕಂಡ ರಾಣಿ ಅಬ್ಬಕ್ಕ

ವಿದೇಶಿ ಪ್ರವಾಸಿಗ ದೆಲ್ಲಾವೆಲ್ಲೆ ೧೫೮೬ರ ಏಪ್ರಿಲ್‌ನಲ್ಲಿ ರೋಮ್‌ನಲ್ಲಿ ಜನಿಸಿ, ಸೈನ್ಯವನ್ನು ಸೇರಿ ಯುದ್ಧ ಪ್ರಕ್ಷುಬ್ಧತೆಯನ್ನು ಕಣ್ಣಾರೆ ಕಂಡವನು. ವೈಯಕ್ತಿಕ ಬದುಕಿನಲ್ಲಿ ಮುರಿದು ಬಿದ್ದ ಪ್ರೇಮದಿಂದ ಭಗ್ನ ಪ್ರಣಯಿಯಾಗಿ ತನ್ನ ಸ್ನೇಹಿತ ವೈದ್ಯಕೀಯ ಪ್ರೊಫೆಸರ್ ಸಿನೋರ್ ಮಾರಿಯೊ ಸ್ಕಪಾನೊ (Synor Mario Schicano) ಸಲಹೆಯಂತೆ ಪೌರ್ವಾತ್ಯ ದೇಶಗಳ ಪ್ರವಾಸ ಕೈಗೊಳ್ಳಬೇಕೆಂದು ಮನಸ್ಸು ಮಾಡಿದ. ೧೬೧೮ರ ಏಪ್ರಿಲ್ ೧೬ ರಂದು ಪ್ರವಾಸ ಹೊರಟು ಬೇರೆ ಬೇರೆ ದೇಶಗಳನ್ನು ಸುತ್ತಿದ. ೧೬೨೩ರ ಜನವರಿ ೧೬ನೆಯ ತಾರೀಕು ಇಂಡಿಯಾಕ್ಕೆ ಹೊರಟು ಹಡಗೊಂದನ್ನು ಏರಿದ. ೧೬೨೩ರ ಫೆಬ್ರವರಿ ೧೦ನೆಯ ತಾರೀಕು ಸೂರತ್‌ನಲ್ಲಿ ಹಡಗು ಇಳಿದು ಗೋವಾಕ್ಕೆ

ಬಂದು, ದಕ್ಷಿಣದ ಕರಾವಳಿಯಲ್ಲಿ ಸಂಚರಿಸಿ ಹೊನ್ನಾವರ, ಇಕ್ಕೇರಿ, ಬಾರ್ಸೆಲೊರ್ (ಬಸರೂರು), ಮಂಗಳೂರು, ಉಳ್ಳಾಲ, ಮನೇಲ್‌ಗಳಿಗೆ ಭೇಟಿಯಿತ್ತು ಕ್ಯಾಲಿಕಟ್ಟಿಗೆ ಹೋಗಿ ಗೋವಾಕ್ಕೆ ಹಿಂದಿರುಗಿದ.

ತನ್ನ ದೀರ್ಘ ಪಯಣದ ದಾರಿಯಲ್ಲಿ ಆತ ಉಳ್ಳಾಲಕ್ಕೆ ಆಗಮಿಸಿದ್ದ ಬಗ್ಗೆ ಬರೆದಿದ್ದಾನೆ: 'ಡಿಸೆಂಬರ್ ೨'ನೆಯ ತಾರೀಕು ಒಲಾಳ ನೋಡಲು ಹೋದೆ. ಮಂಗಳೂರು ಬಂಘೇಲೆ ಎಷ್ಟು ದೂರದಲ್ಲಿದೆಯೇ ಒಲಾಳವೂ ಅಷ್ಟೇ ದೂರದಲ್ಲಿದೆ. ದೊಡ್ಡ ನದಿಯ ಆ ಕಡೆ ತೀರಾ ದಕ್ಷಿಣ ದಿಕ್ಕಿಗಿದೆ. ನದಿಯನ್ನು ದೋಣಿಯಲ್ಲಿ ದಾಟಿ ಅಲ್ಲಿಗೆ ಹೋದೆ. ರಾಣಿ ಇರಲಿಲ್ಲ. ಆಕೆ ಸಾಮಾನ್ಯವಾಗಿ ಅಲ್ಲಿ ಇರದೆ ಭೂಭಾಗದಲ್ಲಿ ಒಂದು ಕಡೆ ತನ್ನ ಆಸ್ಥಾನವನ್ನು ನಡೆಸುತ್ತಿದ್ದಾಳೆ. ಅವಳನ್ನು ನೋಡದೆ ಹೋಗುವುದಕ್ಕೆ ಮನಸ್ಸಾಗಲಿಲ್ಲ; ಏಕೆಂದರೆ ಪೋರ್ಚುಗೀಸರ ಚರಿತ್ರೆಗಳಲ್ಲಿ ಈ ರಾಣಿಯ ಹೆಸರನ್ನು ಎತ್ತಿ ಹೇಳಲಾಗಿದೆ. ಪೋರ್ಚುಗಲರಿಗೆ ಬಹಳ ಹತ್ತಿರವಾದ ಹಾಗೂ ಬಹು ಚೆನ್ನಾಗಿ ಗೊತ್ತಿರುವ ಭೂಮಿ ಎಂದರೆ ಈಕೆಯದು ಎಂದು ತಿಳಿಸಿದ್ದಾರೆ. ಈಕೆಯ ರಾಜ್ಯ ಬಹು ಶ್ರೀಮಂತವೂ ಸಮೃದ್ಧವೂ ಆಗಿದೆ ಎಂದರೆ ತಪ್ಪಾಗಲಾರದು. ಒಲಾಳ ನಗರ ಮುಖ್ಯ ಸಮುದ್ರಕ್ಕೂ ಕೊಲ್ಲಿಗೂ ಮಧ್ಯೆ ಸೊಗಸಾದ ಸ್ಥಳದಲ್ಲಿದೆ.

'ಬಜಾರ್' ಚೆನ್ನಾಗಿದೆ. ನಿತ್ಯ ಬಳಕೆಗೆ ಬೇಕಾದ ಸಾಮಾನುಗಳಲ್ಲದೆ ಬಿಳಿ ಬಣ್ಣದ ಪಟಪಟೆ ಬಟ್ಟೆ ಹೇರಳವಾಗಿ ದೊರೆಯುತ್ತದೆ. ಈ ಬಟ್ಟೆಯನ್ನು ಒಲಾಳದಲ್ಲಿಯೇ ತಯಾರಿಸುತ್ತಾರೆ. ಬಟ್ಟೆ ಒರಟು– ಈ ನಾಡಿನ ಜನರು ಉಪಯೋಗಿಸುವ ಬಟ್ಟೆಯಂತೆ. ಊರಿನ ಕೊನೆಯಲ್ಲಿ ಬಹಳ ಸೊಗಸಾದ ತೋಪು ಇದೆ. ಆ ತೋಪಿನ ಕೊನೆಯಲ್ಲಿ ಒಂದು ದೊಡ್ಡ ದೇವಸ್ಥಾನವಿದೆ. (ಸೋಮೇಶ್ವರ ದೇವಸ್ಥಾನ). ಇದನ್ನು ಅಂದವಾಗಿ ಕಟ್ಟಿದ್ದಾರೆ.

ಒಲಾಳದಲ್ಲಿ ಜೆಂಟೈಲರು, ಮಲಬಾರ್, ಮೂರರು ಇದ್ದಾರೆ. ದಕ್ಷಿಣಕ್ಕೆ ಒಂದು ಮೈಲಿ ದೂರದಲ್ಲಿ ಮೇಲೆ ಹೇಳಿದ ತೋಪುಗಳ ಮಧ್ಯೆ ಒಂದು ಅರಮನೆ ಇದೆ. ರಾಣಿ ಇಲ್ಲಿಗೆ ಬಂದಾಗ ಈ ಅರಮನೆಯಲ್ಲಿರುತ್ತಾಳೆ. ಅರಮನೆ ದೊಡ್ಡದಾಗಿದೆ. ಸುತ್ತ ಗೋಡೆಯೂ ಅಗಳೂ ಇದೆ.ಮೊದಲ ದ್ವಾರವನ್ನು ಪ್ರವೇಶಿಸಿದರೆ ಒಳಗಡೆ ತೆರೆದ ಮುಖಮಂಟಪ (Porche) ಇದೆ. ಇಲ್ಲಿ ಪಹರೆಯವನೊಬ್ಬ ನಿಂತಿದ್ದ ಅದರಿಂದಾಚೆ ದೊಡ್ಡ ಖಾಲಿ ಜಾಗ. ಬಹಳ



ದೊಡ್ಡ ಅಂಗಣದಂತೆ. ಅದರೊಳಗೆ ನಾನು ಹೋಗಲು ಸಾಧ್ಯವಾಗಲಿಲ್ಲ. ಏಕೆಂದರೆ ರಾಣಿಯ ಆಸ್ಥಾನ ಅಲ್ಲಿ ಇರಲಿಲ್ಲ.

ಡಿಸೆಂಬರ್ ೩ ರಂದು ಸಾನ್ ಫ್ರಾನ್ಸಿಸ್ಕೊ ಚರ್ಚಿನಲ್ಲಿ ಪ್ರಾರ್ಥನೆ ಸಲ್ಲಿಸಿ ಒಲಾಳದ ರಾಣಿಯನ್ನು ಆಕೆಯ ಆಸ್ಥಾನದಲ್ಲಿಯೇ ನೋಡುವ ಸಿದ್ಧತೆ ಮಾಡಿಕೊಂಡೆ. ಸೇವಕನಾಗಿ ಲೂಯಿಸ್ ಗೋಮೆಸ್ ಎಂಬ ಖಾಯಂ ನೇಮಕವಿಲ್ಲದ ಸಿಪಾಯಿಯನ್ನು ನೇಮಿಸಿಕೊಂಡೆ. ಈ ಸೇವಕನಿಗೆ ಪೋರ್ಚುಗೀಸ್ ಭಾಷೆ ಬರುತ್ತಿದ್ದರೂ, ಸ್ಥಳದ ದುಭಾಷಿಯೊಬ್ಬನಿದ್ದರೆ ಒಳ್ಳೆಯದೆಂದು ನರಸು ಎಂಬ ಬ್ರಾಹ್ಮಣನನ್ನು ಸೇರಿಸಿಕೊಂಡೆ. ಈತ ಮಂಗಳೂರಿನವನು. ಉತ್ತರದ ಕಡೆಯಿಂದ ಮಂಗಳೂರಿಗೆ ಹರಿದು ಬರುವ ದೊಡ್ಡ ನದಿಯ ಮೂಲಕ (ಗುರುಪುರ ನದಿ) ರಾಣಿಯ ಆಸ್ಥಾನವಿರುವ ಸ್ಥಳಕ್ಕೆ ಹೋಗುವುದೆಂದು ನಿರ್ಧರಿಸಿ ಒಂದು ದೋಣಿಯನ್ನು ಗೊತ್ತು ಮಾಡಿದೆ.

ಮಾರನೆಯ ದಿನ ಬೆಳಿಗ್ಗೆ (೪ನೇ ತಾರೀಕು) ಹೊತ್ತು ಹುಟ್ಟುವುದಕ್ಕಿಂತ ಮೊದಲೇ ದೋಣಿಯಲ್ಲಿ ಕುಳಿತೆ. ಒಂದು ದಿನ ಅಲ್ಲಿ ತಂಗಿ ಮಾರನೆಯ ದಿನ ಬೆಳಿಗ್ಗೆ ದೋಣಿ ನಡೆಸುವ ನಾವಿಕರೊಂದಿಗೆ ಮನೇಲ್ ತಲುಪಿದೆ. ಮನೇಲ್‌ನಲ್ಲಿ ಈಗ ರಾಣಿ ನೆಲೆಸಿದ್ದಾಳೆ. ಇಲ್ಲಿರುವುದು ಕೇವಲ ಒಂದೇ ಒಂದು ಬೀದಿ ಮತ್ತು ಕೆಲವು ಮನೆಗಳು. ಇವುಗಳನ್ನು ಮನೆಗಳೆಂದು ಕರೆಯುವುದಕ್ಕಿಂತ ಗುಡಿಸಲುಗಳೆಂದರೆ ಸರಿಯಾದೀತು. ಆದರೆ ಸುತ್ತಮುತ್ತಲ ಪ್ರದೇಶ ಬಹು ಸೊಗಸಾಗಿದೆ. ಅಲ್ಲಲ್ಲಿ ಮನೆಗಳು ಇವೆ. ರೈತರು ಇದ್ದಾರೆ. ಮನೇಲ್ ಎಂಬ ಊರು ನದಿಯ ಎಡ ದಡದಲ್ಲಿದೆ. ದೋಣಿಯಿಳಿದು ತಂಗಲಿಕ್ಕಾಗಿ ಮನೆಯನ್ನು ಹುಡುಕುತ್ತಾ ಹೋಗುತ್ತಿರುವಾಗ ರಾಣಿಯೇ ಬೀದಿಯಲ್ಲಿ ನಡೆದುಕೊಂಡು ಬರುತ್ತಿದ್ದುದನ್ನು ಕಂಡೆ. ಜೊತೆಯಲ್ಲಿ ಹೆಂಗಸರಾರು ಇರಲಿಲ್ಲ. ಕೇವಲ ನಾಲ್ಕಾರು ಸಿಪಾಯಿಗಳು. ಅವರು ರಾಣಿ ಮುಂದೆ ನಡೆದುಕೊಂಡು ಬರುತ್ತಿದ್ದರು. ಇಲ್ಲಿಯ ಪದ್ಧತಿಯಂತೆ ಹೆಚ್ಚು ಬಟ್ಟೆ ಹಾಕದೆ ಅರೆ ಬೆತ್ತಲೆಯಾಗಿದ್ದರು. ಸೊಂಟಕ್ಕೆ ಒಂದು ತುಂಡು ಬಟ್ಟೆ ಮತ್ತು ಹೆಗಲ ಮೇಲೆ ಅಡ್ಡ ಹೊದಿಕೆಯಾಗಿ ಕಟ್ಟಿಕೊಂಡ ಒಂದು ವಸ್ತ್ರ. ಇಷ್ಟೇ ಅವರ ಉಡುಪು. ಅವರ ಕೈಯಲ್ಲಿ ಕತ್ತಿ ಮತ್ತು ಗುರಾಣಿ ಇದ್ದವು. ರಾಣಿಯ ಹಿಂದೆಯೂ ಐದಾರು ಜನ ಸಿಪಾಯಿಗಳಿದ್ದರು. ಅವರಲ್ಲಿ ಒಬ್ಬ ರಾಣಿಯ ಮೇಲೆ ತಾಳೆಗರಿಯ (ತುಳುವಿನಲ್ಲಿ ತತ್ರ) ಕೊಡೆ ಹಿಡಿದಿದ್ದ.

ರಾಣಿಯ ಮೈಬಣ್ಣ ಇಥಿಯೋಪಿಯನ್ನರ ಬಣ್ಣದಷ್ಟೇ ಕಪ್ಪು. ಬೊಜ್ಜು ಬೆಳೆದು ಗುಡಾಣದಂಥ ಹೊಟ್ಟೆ ಇದ್ದರೂ ನಡಿಗೆ ಚುರುಕಾಗಿತ್ತು. ಆದರೆ ದಡಿಯಳಾಗಿರಲಿಲ್ಲ. ಆಕೆ ವಯಸ್ಸು ಸುಮಾರು ನಲವತ್ತು ಇರಬಹುದು. ಆದರೆ ಪೋರ್ಚುಗಲರು ಆಕೆಗೆ ಇನ್ನೂ ಹೆಚ್ಚು ವಯಸ್ಸಾಗಿದೆ ಎಂದು ಹೇಳಿದ್ದರು. ಸೊಂಟದಿಂದ ಕೆಳಕ್ಕೆ ಮಂದವಾದ ಬಿಳಿಯ ಹತ್ತಿಯ ಸೀರೆ ಉಟ್ಟಿದ್ದಳು. ಕಾಲಿಗೆ ಪಾದರಕ್ಷೆಗಳಿರಲಿಲ್ಲ. ಏಕೆಂದರೆ ಇಂಡಿಯಾದ ಜೆಂಟೈಲ್ ಹೆಂಗಸರು ಮನೆಯಲ್ಲಿ ಇರಲಿ ಹೊರಗೆ ಹೋಗಲಿ ಬರಿಗಾಲಿನಲ್ಲಿ ಇರುತ್ತಾರೆ. ಕೆಲವು ಶ್ರೀಮಂತರು ಪಾದರಕ್ಷೆಗಳನ್ನು ಹಾಕಿಕೊಳ್ಳುತ್ತಾರೆ. ಯಾರೂ ಪಾದ ಮುಚ್ಚುವಂತಹ ಪಾದರಕ್ಷೆಗಳನ್ನು ಹಾಕಿಕೊಳ್ಳುವುದಿಲ್ಲ. ರಾಣಿ ತನ್ನ ಸೊಂಟದಿಂದ ಮೇಲಕ್ಕೆ ತಲೆಗೆ ಕಟ್ಟಿದ್ದ ಮತ್ತು ತೋಳುಗಳು ಹಾಗೂ ಎದೆಯ ಮೇಲೆ ಇಳಿಯ ಬಿಟ್ಟ ಬಟ್ಟೆಯಲ್ಲದೆ ಬೇರೆ ಬಟ್ಟೆ ಹಾಕಿರಲಿಲ್ಲ. ಒಟ್ಟಿನಲ್ಲಿ ಆಕೆಯನ್ನು ಕೋಮಲಾಂಗಿಯಾದ ಕುಲೀನ ಮನೆತನದ ರಾಣಿಯೆಂದು ಹೇಳುವುದಕ್ಕಿಂತ ಯಾವಳೋ ಒಬ್ಬಳು ಪರಿಚಾರಕಿ ಅಥವಾ ಅಗಸಗಿತ್ತಿ ಎಂದು ಕರೆದರೆ ಒಪ್ಪುತ್ತಿತ್ತು. (In brief, her aspects and habits represented rather a dirty kitchen woman or laundress than a delicate and noble queen).

ಆಕೆಯನ್ನು ಕಂಡು ನಾನು ಸ್ಪೇನ್ ರಾಜನ ಸೈನ್ಯಗಳನ್ನು ನಿರ್ನಾಮ ಮಾಡಿದಳೆಂದು ಯುರೋಪಿನಲ್ಲಿ ಹೊಗಳಿಸಿಕೊಂಡವಳು ಇವಳು ಅಲ್ಲವೋ ಎಂದು ಮನಸ್ಸಿನಲ್ಲಿಯೇ ಅಂದುಕೊಂಡೆ.

ರಾಣಿಯನ್ನು ನೋಡುವುದಕ್ಕೆ ಹೀಗಿದ್ದರೂ ಮಾತಿನಲ್ಲಿ ತನ್ನ ಘನತೆಯನ್ನು ತೋರಿದಳು. ಆಕೆ ಮಾತು ಬಹಳ ಸೌಮ್ಯವಾಗಿತ್ತು. ಬಹಳ ದೂರದೃಷ್ಟಿಯ ಹಾಗೂ ವಿವೇಕದ ಹೆಂಗಸಿನಂತೆ ಮಾತನಾಡಿದಳು. ಹಲ್ಲುಗಳು ಇಲ್ಲವಾದ್ದರಿಂದ ಆಕೆ ಮುಖವನ್ನು ಅರ್ಧ ಮುಚ್ಚಿಕೊಂಡು ತಿರುಗಾಡುತ್ತಾಳೆ ಎಂದು ಹೇಳಿದ್ದರು. ಆದರೆ ನನಗೆ ಹಾಗೆ ಕಾಣಲಿಲ್ಲ. ನನ್ನ ಕಣ್ಣಿಗಾಗಲೀ ಕಿವಿಗಾಗಲೀ ಆಕೆಗೆ ಹಲ್ಲಿಲ್ಲವೆಂಬ ಭಾವನೆ ಬರಲಿಲ್ಲ. ಆಕೆ ಕೆಲವು ವೇಳೆ ಮುಖವನ್ನು ಅರ್ಧ ಮುಚ್ಚಿಕೊಳ್ಳುತ್ತಿದ್ದದ್ದು ಪೌರ್ವಾತ್ಯ ಹೆಂಗಸರ ಒಂದು ಸೌಜನ್ಯದ ನಡತೆ ಎಂದು ನನ್ನ ಭಾವನೆ. ಆಕೆ ದಪ್ಪವಾಗಿದ್ದರೂ ವಕ್ರವಾಗಿ ಕಾಣಿಸುತ್ತಿರಲಿಲ್ಲ ಎಂದು ಹೇಳದಿದ್ದರೆ ತಪ್ಪಾದೀತು. ಆಕೆ ರೂಪವತಿಯಾಗಿದ್ದಿರಬೇಕು. ಆಕೆಯ



ಗಂಭೀರ ಸೌಂದರ್ಯದ ಕಾರಣವಾಗಿ ಸ್ವಲ್ಪ ಗಡಸಿನ ಹೆಣ್ಣು ಎಂದು ಪ್ರತೀತಿ ಇದೆ.

ಒಲಾಳ ರಾಣಿಯ ಹೆಸರು ಅಬಗ್–ಜೆವಿ–ಚೌತ್ರು (Abag- Geve- Ciautru= ಅಬ್ಬಕ್ಕ ದೇವಿ ಚೌಟರು) ಅಬಗ್ ಅವಳ ನಿಜವಾದ ಹೆಸರು. ದೇವಿ ಎಂದರೆ ಮಹಿಳೆ (Lady) ಇವರು ದೇವರುಗಳನ್ನು 'ದೇವಿ' ಎಂದು ಕರೆಯುತ್ತಾರೆ. 'ದೇವ್' ಅಥವಾ 'ದೇವರು' ಪದಗಳನ್ನು ರಾಜರಿಗೂ ದೇವರಿಗೂ ಹೇಳುತ್ತಾರೆ. ಜೆಂಟೈಲರ ದೇವರುಗಳು ಬಹುತೇಕ ಹೆಸರಾಂತ ರಾಜರುಗಳೆಂದು ಕಾಣುತ್ತದೆ. ಹೀಗೆ ಪ್ರಪಂಚದ ಇತರ ಭಾಗಗಳಲ್ಲಿಯೂ ಇರುವುದುಂಟು. ಚೌತ್ರು ಎಂಬುದು ಒಲಾಳದ ರಾಜರಿಗೂ ರಾಣಿಯರಿಗೂ ಉಪಯೋಗಿಸುವ ಬಿರುದು.

ಇಲ್ಲಿ ಹೆಂಗಸು ಏಕೆ ರಾಜ್ಯವಾಳುತ್ತಿದ್ದಾಳೆಂದು ನಾನು ವಿಚಾರಿಸಿದಾಗ, ತಿಳಿದವರು ಹೇಳಿದರು. ಒಲಾಳದಲ್ಲಿ ಮೊದಲಿನಿಂದಲೂ ಗಂಡಸರೇ ಆಳುತ್ತಿದ್ದುದೆಂದು, ಆದರೆ ಇಂಡಿಯಾದ ಬಹುಮಟ್ಟಿನ ಜೆಂಟೈಲರಲ್ಲಿ ತಂದೆಗೆ ಮಗ ಹಕ್ಕುದಾರನಾಗದೆ ಸಹೋದರಿಯ ಮಗ ಹಕ್ಕುದಾರನಾಗುವುದು ಪದ್ಧತಿಯೆಂದೂ ಗೊತ್ತಾಯಿತು.'ಹೆಂಗಸಿನ ವಾವೆ' (Female line) ಗಂಡಸಿನ ವಾವೆಗಿಂತ ಹೆಚ್ಚು ಖಚಿತ. ಇದು ನಿಜವಾಗಿ ಹೌದು. ಆದರೆ ಒಲಾಳದ ಹಿಂದಿನ ರಾಜನಿಗೆ ಸಹೋದರಿಯರ ಮಕ್ಕಳಾಗಲಿ ಬೇರೆ ವಾರಸುದಾರರಾಗಲಿ ಇಲ್ಲದೇ ಹೋದ ಕಾರಣ ಆತನ ಹೆಂಡತಿ ಪಟ್ಟಕ್ಕೆ ಬಂದಳು. ಅವಳಿಗೂ ಮಕ್ಕಳಿರಲಿಲ್ಲ. ಅವಳ ಮೇಲೆ ಅಬಗ ದೇವಿ ಪಟ್ಟಕ್ಕೆ ಬಂದಿದ್ದಾಳೆ. ಮುಂದೆ ಈಕೆಯ ಮಗ ಪಟ್ಟಕ್ಕೆ ಬರುತ್ತಾನೆ. ಅವನ ನಂತರ ಅವನ ಪಟ್ಟಕ್ಕೆ ಸೋದರಿಯ ಗಂಡು ಮಕ್ಕಳು ಪಟ್ಟಕ್ಕೆ ಬರುತ್ತಾರೆ. (ಡಾ. ಹೆಚ್. ಎಲ್. ನಾಗೇಗೌಡ ಪುಟ ಸಂಖ್ಯೆ ೨೪೮, ೨೦೦೭)

❑

## ೨. ಬ್ರಿಟಿಷರ ವಸಾಹತುಶಾಹಿ ಆಡಳಿತ ಮತ್ತು ಹೋರಾಟ

ಕರ್ನಾಟಕ ಕರಾವಳಿಯಿಂದ ಪೋರ್ಚುಗೀಸರ ನಿರ್ಗಮನ ನಂತರ ಬ್ರಿಟಿಷರು ಈಸ್ಟ್ ಇಂಡಿಯಾ ಕಂಪನಿಯನ್ನು ಸ್ಥಾಪಿಸಿ, ಭಾರತವನ್ನು ೨೦೦ ವರ್ಷಗಳ ಕಾಲ ಆಳಿದರು. ಈ ದೀರ್ಘ ಕಾಲದಲ್ಲಿ ಅಲ್ಲಲ್ಲಿ ಸಣ್ಣ ಪುಟ್ಟ ಅರಸರು ವಿರೋಧಗಳನ್ನು ವ್ಯಕ್ತ ಪಡಿಸಿದ್ದಾರೆ. ಇದಕ್ಕೆಲ್ಲಕ್ಕಿಂತಲೂ ಪೂರ್ವದಲ್ಲಿ ಕ್ರಿ. ಶ. ೧೮೩೦ರಲ್ಲಿ ನಡೆದ ರೈತ ಬಂಡಾಯ ಚರಿತ್ರೆಯಲ್ಲಿ ದಾಖಲಾಗಿಲ್ಲ. ತುಳುವಿನಲ್ಲಿ 'ಕಲ್ಯಾಣಪ್ಪನ ಕಾಟ್‌ಕಾಯಿ' ಎಂದು ಉಲ್ಲೇಖವಾದ ರೈತ ದಂಗೆಯು ದರೋಡೆ ಎಂದೇ ಪ್ರಚಲಿತವಾಗಿತ್ತು. ಬ್ರಿಟಿಷರು ಭೂಮಿಯ ಮೇಲೆ ವಿಧಿಸಿದ ಹೆಚ್ಚುವರಿ ತೆರಿಗೆಗಳು ಸುಂಕ ಕಟ್ಟೆಯಲ್ಲಿ ವಸೂಲು ಮಾಡುತ್ತಿದ್ದ ಅತಿಯಾದ ಸುಂಕ ರೈತರನ್ನು ದಂಗೆ ಏಳುವಂತೆ ಮಾಡಿತು. ಮಡಿಕೇರಿಯ ಅರಸನ ಸಾಮ್ರಾಜ್ಯವನ್ನು ಬ್ರಿಟಿಷರು ವಶಪಡಿಸಿಕೊಂಡಾಗ ವಾರಿಸುದಾರನಾದ ಕಲ್ಯಾಣಪ್ಪನು ತಲೆ ಮರೆಸಿಕೊಂಡನು. ಆ ಹೊತ್ತಿನಲ್ಲಿ ಈ ಅವಕಾಶವನ್ನು ಉಪಯೋಗಿಸಿಕೊಂಡ ಪುಟ್ಟ ಬಸವ ಎಂಬ ರೈತ ಯುವಕ ತನ್ನ ಅನುಯಾಯಿಗಳೊಂದಿಗೆ ಬ್ರಿಟಿಷರ ಆಡಳಿತದ ವಿರುದ್ಧ ಸಂಘಟಿತವಾಗಿ ಬಂಡೆದ್ದರು. ಪರಿಣಾಮ ಸುಳ್ಯದಿಂದ ಹೊರಟು ಮಂಗಳೂರಿನವರೆಗೆ ಪಯಣಿಸಿ ಯುವಕರನ್ನು ಜೊತೆ ಸೇರಿಸಿಕೊಂಡು ಬೆಂಬಲ ಪಡೆಯಲು ಯತ್ನಿಸಿದರು. ಮಂಗಳೂರಿನ ನಗರವನ್ನು ಒಂದು ವಾರ ಕಾಲ ತಮ್ಮ ಆಡಳಿತದ ಹಿಡಿತದಲ್ಲಿ ಇರಿಸಿಕೊಂಡರೂ, ತಮ್ಮವರ ಷಡ್ಯಂತ್ರಗಳಿಂದಲೇ ನೇಣಿಗೆ ಶರಣಾಗಬೇಕಾಯಿತು. ಈ ಯುವಕರ ಸಮುದ್ರ ತೀರದ ಉದ್ದಕ್ಕೂ ಪಯಣಿಸಿದ್ದರಿಂದ ಉಳ್ಳಾಲದಲ್ಲಿ ಅವರಿಗೆ ಒಳ್ಳೆಯ ಬೆಂಬಲ ಸಿಕ್ಕಿತು.

ಆನಂತರದಲ್ಲಿ ಮಹಾತ್ಮಾ ಗಾಂಧೀಜಿ ನೇತೃತ್ವದಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಯು ಹೆಚ್ಚು ಪ್ರಭಾವಿಯಾಗಿತ್ತು. ದಕ್ಷಿಣ ಭಾರತದ ಗಾಂಧೀಜಿ ಎಂದೇ ಗುರುತಿಸಿಕೊಂಡಿದ್ದ ಕಾರ್ನಾಡು ಸದಾಶಿವರಾಯರ ನೇತೃತ್ವದಲ್ಲಿ ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯ ಯುವಕರು ಚಳವಳಿಯಲ್ಲಿ ಭಾಗವಹಿಸಿದರು. ಮಹಾತ್ಮಾ ಗಾಂಧೀಜಿಯವರು ೧೯೩೪ನೆಯ ಇಸವಿ ಫೆಬ್ರವರಿ ೨೪ರಂದು ಮಂಗಳೂರಿನ ಶ್ರೀ ಜ್ಞಾನೋದಯ ಸಮಾಜ ಮಂದಿರಕ್ಕೆ ಭೇಟಿ ನೀಡಿದ್ದರು. ಆ ಸಂದರ್ಭದಲ್ಲಿ ಗಾಂಧೀಜಿಯವರನ್ನು ಕಾಣಲು ದೂರ ದೂರದ ಊರುಗಳಿಂದ ಜನರು ಬಂದು ನೆರೆದಿದ್ದರು. ಮಹಾಪೂರದಂತೆ ಬಂದ ಜನರಿಗೆ ಗಾಂಧೀಜಿಯವರನ್ನು ಭೇಟಿ ಮಾಡಲು ಅವಕಾಶ ಕಲ್ಪಿಸಲು, ನಿರ್ವಹಣೆ ಮಾಡಲು ಸ್ವಯಂಸೇವಕರ ಗುಂಪನ್ನು ಸಿದ್ಧಗೊಳಿಸಲಾಗಿತ್ತು. ಈ ಸಂದರ್ಭದಲ್ಲಿ ಬೆಂಗ್ರೆ, ಉಳ್ಳಾಲ, ಬೋಳೂರು ಹಾಗೂ ಇತರ ಕಡೆಯಿಂದ ಬಂದ ಸುಮಾರು ೭೫ ಮಂದಿ ನಿಷ್ಠಾವಂತ ಯುವಕರು ಸ್ವಯಂಸೇವಕರಾಗಿ ಕೆಲಸ ಮಾಡಿದ್ದರು. ಇವರ ಸಂಪೂರ್ಣ ಜವಾಬ್ದಾರಿಯನ್ನು ಎಲ್. ಟಿ. ಸುವರ್ಣ, ಟಿ.ಎಲ್. ಪುತ್ರನ್ ಹಾಗೂ ಇತರ ಮುಂದಾಳುಗಳು ವಹಿಸಿದ್ದರು. ಸ್ವಯಂಸೇವಕರು ಸಮಾಜ ಮಂದಿರವನ್ನು ಸ್ವಚ್ಛಗೊಳಿಸಿ ಅಲಂಕರಿಸಿ ಜನರು ಕುಳಿತುಕೊಳ್ಳುವುದಕ್ಕಾಗಿ ಮಂದಿರದ ಒಳಗೆ ಉದ್ದಗಲಕ್ಕೆ ಜಮಾಖಾನೆಯನ್ನು ಹಾಸಿದ್ದರು. ಶಿಸ್ತನ್ನು ಪಾಲಿಸುವ ಜನಸ್ತೋಮವನ್ನು ಪ್ರೀತಿಯಿಂದ ನಿಯಂತ್ರಿಸುವ ಬಗ್ಗೆ ತರಬೇತಿಯನ್ನೂ ಕೊಡಲಾಗಿತ್ತು. ಗಾಂಧೀಜಿಯವರನ್ನು ಕಾಣಬೇಕು, ಅವರ ಪ್ರೇರಣೆಯಿಂದ, ಸ್ವಾತಂತ್ರ್ಯ ಹೋರಾಟದಲ್ಲಿ ಇನ್ನಷ್ಟು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂಬುದು ಅಲ್ಲಿ ಸೇರಿದ್ದ ಎಲ್ಲರ ಆಶಯವಾಗಿತ್ತು.

೧೯೩೨ರಲ್ಲಿ ವಿದೇಶಿ ವಸ್ತುಗಳ ನಿಷೇಧ ಚಳವಳಿ, ೧೯೩೩ ಫೆಬ್ರವರಿ ೧೪ರಂದು ಬಂದರಿನಲ್ಲಿ ನಡೆದ ಉಪ್ಪಿನ ಸತ್ಯಾಗ್ರಹ ಇವುಗಳಲ್ಲೆಲ್ಲ ಉಳ್ಳಾಲದ ಯುವಕರು ಪಾಲು ಪಡೆದಿದ್ದರು. ಮುಖ್ಯ ನೇತಾರರ ಹೆಸರುಗಳು ದಾಖಲಾದಂತೆ ಎಲ್ಲಾ ಜನಸಾಮಾನ್ಯರ ಹೆಸರುಗಳು ಬಂಧನಗೊಂಡ ಸೆರೆಮನೆಯ ಕಡತಗಳಲ್ಲಾಗಲೀ ಉಳಿದ ದಾಖಲೆಗಳಲ್ಲಾಗಲೀ ಲಭ್ಯವಾಗುವುದಿಲ್ಲ. ಕೇವಲ ಕಾಲಾಳುಗಳಾಗಿ, ತಮ್ಮ ಪ್ರಾಣ ಹಾಗೂ ಆಸ್ತಿಪಾಸ್ತಿಗಳನ್ನು ರಾಷ್ಟ್ರೀಯ ಚಳವಳಿಗಾಗಿ ಅರ್ಪಿಸಿದ ನೂರಾರು ಸಾವಿರಾರು ಹಿರಿಯರ ತ್ಯಾಗದ ಫಲವೇ ಸ್ವಾತಂತ್ರ್ಯ.

ಗಾಂಧೀಜಿ ನೇತೃತ್ವದ ರಾಷ್ಟ್ರೀಯ ಚಳವಳಿ ಮತ್ತು ಹೋರಾಟಗಳಲ್ಲಿ ಭಾಗವಹಿಸಿ ತಮ್ಮ ವಿಚಾರಪೂರ್ಣತೆಯನ್ನು ರಾಷ್ಟ್ರದ ಅಭಿವೃದ್ಧಿಯ

ಪರಿಕಲ್ಪನೆಯಲ್ಲಿ ಕಟ್ಟಿದ ಹಿರಿಯರಲ್ಲಿ ಪ್ರಮುಖರೆಂದರೆ ಉಳ್ಳಾಲ ಶ್ರೀನಿವಾಸ ಮಲ್ಯ.

## ಉಳ್ಳಾಲ ಶ್ರೀನಿವಾಸ ಮಲ್ಯ

ಉಳ್ಳಾಲ ಶ್ರೀನಿವಾಸ ಮಲ್ಯರು ಶೀನಪ್ಪ ಮಲ್ಯ ಎಂದೂ ಸ್ಥಳೀಯವಾಗಿ ಪರಿಚಿತರು. ಆಧುನಿಕ ಕರಾವಳಿಯ ನಿರ್ಮಾಣದ ಹರಿಕಾರರು. ೨೧ ನವಂಬರ್ ೧೯೦೨ರಂದು ಜನಿಸಿದರು. ಸ್ವಾತಂತ್ರ್ಯ ಚಳವಳಿಯಲ್ಲಿ ಅತ್ಯಂತ ಕಿರಿಯ ವಯಸ್ಸಿನಲ್ಲಿ ಭಾಗವಹಿಸಿ ಕಾಲೇಜು ಶಿಕ್ಷಣವನ್ನು ಅರ್ಧದಲ್ಲಿಯೇ ಮೊಟಕುಗೊಳಿಸಬೇಕಾಯಿತು. ೧೯೨೦ ಅಗಸ್ಟ್ ೧೯ ರಂದು ಮೊದಲ ಬಾರಿಗೆ ಮಂಗಳೂರಿಗೆ ಆಗಮಿಸಿದ ಗಾಂಧೀಜಿಯವರು, ವಿವಿಧೆಡೆಗಳಲ್ಲಿ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಅಂದಿನ ದಿನಗಳಲ್ಲಿ ಮಂಗಳೂರು ಪ್ರಾಂತ್ಯದಲ್ಲಿ ಸ್ವಾತಂತ್ರ್ಯ ಚಳವಳಿಯು ಕಾರ್ನಾಡು ಸದಾಶಿವರಾಯರ ಮುಂದಾಳತ್ವದಲ್ಲಿ ನಡೆಯುತ್ತಿತ್ತು. ಅವರ ಚಟುವಟಿಕೆಗಳನ್ನು ಕಂಡು, ಹೋರಾಟದ ಪ್ರಭಾವಕ್ಕೆ ಒಳಗಾದ ಶ್ರೀನಿವಾಸ ಮಲ್ಯರು ೧೮ನೇ ವಯಸ್ಸಿನಲ್ಲಿ ಕಾಲೇಜು ಶಿಕ್ಷಣವನ್ನು ತೊರೆದು ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಶ್ರೀನಿವಾಸ ಮಲ್ಯರು ಗಾಂಧೀಜಿಯವರ ಕರೆಯಂತೆ ಖಾದಿಧಾರಣೆ ಮಾಡಿದರು. ಸ್ಥಳೀಯ ಮತ್ತು ಪ್ರಾಂತೀಯ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. ಕ್ವಿಟ್ ಇಂಡಿಯಾ ಚಳವಳಿ, ವೈಯಕ್ತಿಕ ಸತ್ಯಾಗ್ರಹದಂತಹ ರಾಷ್ಟ್ರೀಯ ಆಂದೋಲನಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ೧೯೪೨ರ ಕ್ವಿಟ್ ಇಂಡಿಯಾ ಚಳವಳಿಯ ಸಂದರ್ಭದಲ್ಲಿ ಪೊಲೀಸರು ಅವರನ್ನು ಬಂಧಿಸಿದರು.

ಆದರೆ ಬಂಧನದ ಸಂದರ್ಭದಲ್ಲಿ ಅವರಿಗೆ ಅನೇಕ ಹೋರಾಟಗಾರರ ಪರಿಚಯವಾಯಿತು. ಕಾಮರಾಜ, ನಾಟಾರ್, ಪಿ. ಸುಬ್ರಹ್ಮಣ್ಯ, ಡಾ.ವೆಂಕಟ ರಾಮನ್ ಮತ್ತಿತರರು ಸೆರೆವಾಸದ ವೇಳೆ ಮಲ್ಯರ ಸಹವರ್ತಿಗಳಾಗಿದ್ದರು. ಭಾರತ ದೇಶದ ಸ್ವಾತಂತ್ರ್ಯ ಚಳವಳಿ ಮತ್ತು ದೊರೆತ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದಕ್ಕಾಗಿ ಪ್ರಯತ್ನಗಳನ್ನು ಮಾಡುತ್ತಾ ದೇಶವನ್ನು ಬಲಿಷ್ಠವಾಗಿ ಕಟ್ಟುವ ದಿಶೆಯಲ್ಲಿ ಅವರಲ್ಲಿ ದೂರದೃಷ್ಟಿಯಿತ್ತು. ಹಾಗಾಗಿ ಮಹತ್ತರವಾದ ಕಾರ್ಯಯೋಜನೆಗಳನ್ನು ರೂಪಿಸಿ ಕಾರ್ಯರೂಪಕ್ಕಿಳಿದವರು ಉಳ್ಳಾಲ ಶ್ರೀನಿವಾಸ ಮಲ್ಯರು. ಉತ್ತರ ಹಿಂದೂಸ್ಥಾನದ ಮುಖಂಡರು ಅವರನ್ನು 'ಮಲ್ಲಯ್ಯ' ಎಂದು ಕರೆಯುತ್ತಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅವರು 'ಶೀನಪ್ಪ ಮಲ್ಯ' ಆಗಿದ್ದರು.



ಇವರ ತಂದೆ ಶ್ರೀ ಉಳ್ಳಾಲ ಮಂಜುನಾಥ್ ಮಲ್ಯ, ತಾಯಿ ಸರಸ್ವತಿ ಯಾನೆ ರುಕ್ಮಾಬಾಯಿ, ಹಿರಿಯ ಅಣ್ಣ ಮಾಧವ ಮಲ್ಯ, ಸಾಮಾಜಿಕ ಕಾರ್ಯಕರ್ತರಾಗಿ ಹೆಸರುವಾಸಿಯಾದ ಡಾ। ಪದ್ಮನಾಭ ಮಲ್ಯ, ಇಬ್ಬರು ಸಹೋದರಿಯರು ಶ್ರೀಮತಿ ಬಾಮಿ ಸಂಜೀವ ಪಾಂಡುರಂಗ ಶೆಣೈ ಮತ್ತು ಶ್ರೀಮತಿ ಲಕ್ಷ್ಮೀ ನರಸಿಂಹ ಭಟ್.

## ಬಾಲ್ಯ ಮತ್ತು ಶಿಕ್ಷಣ:

ಶ್ರೀನಿವಾಸ ಮಲ್ಯರು ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನ ಪ್ರಾಥಮಿಕ ಶಾಲೆಯಲ್ಲಿ ಎಂಟನೇ ತರಗತಿಯವರೆಗೆ ಕಲಿತು, ಮುಂದಿನ ತರಗತಿಗಳನ್ನು ಕೆನರಾ ಹೈಸ್ಕೂಲಿನಲ್ಲಿ ಪೂರೈಸಿ ಮೆಟ್ರಿಕ್ ಪರೀಕ್ಷೆ ಪಾಸಾದರು. ಮುಂದಿನ ಉನ್ನತ ಶಿಕ್ಷಣಕ್ಕಾಗಿ ಮಂಗಳೂರಿನ ಸರಕಾರಿ ಕಾಲೇಜಿನಲ್ಲಿ ಅಂದಿನ ಇಂಟರ್‌ಮೀಡಿಯೆಟ್ ಕ್ಲಾಸಿಗೆ ಸೇರ್ಪಡೆಗೊಂಡರು. ಕಾಲೇಜು ವಿದ್ಯಾಭ್ಯಾಸದ ದಿನಗಳಲ್ಲೇ ಭಾರತ ದೇಶದ ಸ್ವಾತಂತ್ರ್ಯ ಹೋರಾಟದ ಕುರಿತು ಆಸ್ಥೆ ಬೆಳೆಸಿಕೊಂಡರು. ೧೯೨೦ರಲ್ಲಿ ಗಾಂಧೀಜಿ ಮಂಗಳೂರಿಗೆ ಬಂದು ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮಂಗಳೂರಿನ ಜನತೆಯ ಮುಂದೆ ಸ್ವಾತಂತ್ರ್ಯ ಚಳವಳಿಯಲ್ಲಿ ದೇಶದ ಜನತೆ ವಹಿಸಬೇಕಾದ ಪಾತ್ರ, ಅಹಿಂಸಾತ್ಮಕ ಚಳವಳಿ, ದಲಿತೋದ್ಧಾರ, ದಲಿತರಿಗೆ ದೇವಳಗಳಲ್ಲಿ ಪ್ರವೇಶ, ಖಾದಿ–ಚರಕಗಳ ಬಗ್ಗೆ ಕೊಟ್ಟ ಸಂದೇಶಗಳಿಂದ ಶ್ರೀನಿವಾಸ ಮಲ್ಯರು ಬಹಳವೇ ಪ್ರಭಾವಿತರಾದರು. ತನ್ನ ೧೮ನೆಯ ವಯಸ್ಸಿನಲ್ಲಿ ಸ್ವಾತಂತ್ರ್ಯ ಚಳವಳಿಯಲ್ಲಿ ಓರ್ವ ಸ್ವಯಂಸೇವಕನಾಗಿ ಧುಮುಕುವ ನಿರ್ಧಾರವನ್ನು ಅವರು ಮಾಡಿದರು.

ಮೊದಲಿಗೆ ಆಗಿನ ಹಿರಿಯ ನಾಯಕರಿಂದ ಅವರು ದ.ಕ ಜಿಲ್ಲೆಯ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿ ನೇಮಕಗೊಂಡರು. ನಂತರ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿ ನೇಮಕಗೊಂಡರು. ನಂತರ ಕರ್ನಾಟಕ ಕಾಂಗ್ರೆಸ್ ಸಮಿತಿಯಲ್ಲಿ ಒಬ್ಬ ಸದಸ್ಯನಾಗಿ ಚುನಾಯಿತರಾದರು. ಸ್ವಾತಂತ್ರ್ಯಪೂರ್ವ ದಿನಗಳಲ್ಲಿ ಕರ್ನಾಟಕ ಕಾಂಗ್ರೆಸ್

ಸಮಿತಿಯ ಕೇಂದ್ರ ಕಚೇರಿ ಹುಬ್ಬಳ್ಳಿಯಲ್ಲಿ ಇತ್ತು. ೧೯೩೦ನೇ ಇಸವಿಯಲ್ಲಿ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯ ನಾಯಕರಾಗಿದ್ದ ಶ್ರೀನಿವಾಸ ಮಲ್ಯರು ಮುಂದೆ ಸಾಗಿ ಮುಂಚೂಣಿಯ ನಾಯಕರಾದರು. ಕೆಲವು ಬಾರಿ ಅವರು ಭೂಗತರಾಗಿಯೇ ಕಾರ್ಯನಿರ್ವಹಿಸಬೇಕಾಗಿಯೂ ಬಂತು. ಅಂತಹ ದಿನಗಳಲ್ಲಿ ಚತುರಮತಿಯಾಗಿದ್ದ ಮಲ್ಯರು ಯಾವುದೇ ವೇಷ ಧರಿಸಿ ಎಲ್ಲಿಯಾವ ಊರಿನಲ್ಲಿ, ಶೆಹರಿನಲ್ಲಿ ಇರುತ್ತಿದ್ದರು ಎನ್ನುವುದು ಬ್ರಿಟಿಷರಿಗೆ ತಿಳಿಯುತ್ತಿರಲಿಲ್ಲ. ಅವರನ್ನು ಹಿಡಿದು ಜೈಲಿಗೆ ತಳ್ಳಲು ಸಹಜವಾಗಿ ಪೊಲೀಸ್ ಅಧಿಕಾರಿಗಳು ಕಟ್ಟೆಚ್ಚರ ವಹಿಸಿ ಹೊಂಚು ಹಾಕುತ್ತಿದ್ದರು.ಆದರೂ ಅವರೆಲ್ಲರ ಕಣ್ಣಿಗೆ ಮಣ್ಣೆರಚಿ ನುಸುಳಿ ಪಾರಾಗುತ್ತಿದ್ದರು ಮಲ್ಯರು.

ಮೈಸೂರು ರಾಜ್ಯದಲ್ಲಿ ಮಹಾರಾಜರ ಆಳ್ವಿಕೆ ಕೊನೆಗೊಂಡ ಬಳಿಕ ಮೈಸೂರು ಕಾಂಗ್ರೆಸ್ ಸಮಿತಿ ಕೆ.ಪಿ.ಸಿ.ಸಿಯೊಡನೆ ಸಮ್ಮಿಳಿತಗೊಂಡು 'ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ' ಎಂದು ಘೋಷಣೆಯಾಯಿತು. ಆವಾಗ ಶ್ರೀನಿವಾಸ ಮಲ್ಯರು ದೇಶದ ರಾಜಧಾನಿ ದಿಲ್ಲಿಗೆ ಘಟನಾ ಸಮಿತಿಯ ಸದಸ್ಯರಾಗಿ ಚೀಫ್‌ವಿಪ್ ಆಗಿ ನೇಮಿಸಲ್ಪಟ್ಟಿದ್ದರು.

ಉಪ್ಪಿನ ಸತ್ಯಾಗ್ರಹ ಸಂದರ್ಭದಲ್ಲಿ ಹಾಗೂ ೧೯೪೨ರಲ್ಲಿ 'ಬ್ರಿಟಿಷರೇ, ಭಾರತ ಬಿಟ್ಟು ತೊಲಗಿ' ಚಳವಳಿಯ ಕಾಲದಲ್ಲಿಯೂ ಮಹಾತ್ಮರ ಕರೆಗೆ ಓಗೊಟ್ಟು ಚಳವಳಿಯಲ್ಲಿ ಭಾಗವಹಿಸಿದ ಮಲ್ಯರು, ಕೆಲವು ದಿನಗಳ ಕಾಲ ಜೈಲು ವಾಸ ಮಾಡಬೇಕಾಯಿತು. ಶ್ರೀನಿವಾಸ ಮಲ್ಯರು ೧೯೩೭ರಿಂದ ೪೭ರತನಕ ಅಂದರೆ ರಾಷ್ಟ್ರದ ಸ್ವಾತಂತ್ರ್ಯದ ಸಂಗ್ರಾಮದ ಸಂಕ್ರಮಣ ಕಾಲದಲ್ಲಿ, ಅನೇಕ ಮಂದಿ ಕಾಂಗ್ರೆಸ್ ಕಾರ್ಯಕರ್ತರು ಜೈಲಿಗೆ ಹೋಗಬೇಕಾಗಿ ಬಂದಾಗ, ಇತ್ತ ಅವರ ಕುಟುಂಬದ ಸದಸ್ಯರು ಉಪವಾಸ ಬೀಳದಂತೆ ಆರ್ಥಿಕ ನೆರವನ್ನು, ಇತರ ಸಹಾಯಗಳನ್ನು ಕಾಲಕಾಲಕ್ಕೆ ಒದಗಿಸುವ ವ್ಯವಸ್ಥೆಯೊಂದನ್ನು ರೂಪಿಸಿದ್ದರು. ಅಂತೆಯೇ ಕಾಂಗ್ರೆಸ್ ಪಕ್ಷದ ಕಚೇರಿಗಳು, ಕೆಲಸ ಮಾಡುವ ಸಿಬ್ಬಂದಿಗೆ ಹಣದ ಅಡಚಣೆ ಉಂಟಾಗದಂತೆ ಮಲ್ಯರು ಜವಾಬ್ದಾರಿ ವಹಿಸಿದ್ದರು.

ಬಂಟವಾಳದ ಶ್ರೀಮಂತ ಮತ್ತು ಪ್ರತಿಷ್ಠಿತ ಪ್ರಭುಗಳ ಮನೆತನವಾದ ಸಾಹುಕಾರ ದಾಮೋದರ ಪ್ರಭುಗಳ ಮಗಳು ಇಂದಿರಾ ಬಾಯಿಯವರೊಡನೆ ಶ್ರೀನಿವಾಸ ಮಲ್ಯರ ಮದುವೆ ಬಂಟವಾಳದಲ್ಲಿ ನೆರವೇರಿತು.



## ದೇಶ ಸ್ವತಂತ್ರವಾದ ಬಳಿಕ

೧೯೫೨ರ ಮಹಾ ಚುನಾವಣೆ ಸಂದರ್ಭ ಆಗ ರಾಷ್ಟ್ರೀಯ ಪಕ್ಷವಾದ ಕಾಂಗ್ರೆಸ್ಸಿನ ಅಧ್ಯಕ್ಷರದಾಗಿದ್ದ ಡಾ.ಪುರುಷೋತ್ತಮದಾಸ ಟಂಡನವರು ಪಂಡಿತ್ ನೆಹರೂವರು ಮುಖಂಡತ್ವದಲ್ಲಿ ಚುನಾವಣೆ ಎದುರಿಸುವುದೆಂದು ಕಾಂಗ್ರೆಸ್ ಪಕ್ಷ ನಿರ್ಣಯಿಸಿತು. ಅಂತಹ ಸಂದಿಗ್ಧ ಕಾಲದಲ್ಲಿ ಲಾಲಬಹದ್ದೂರ ಶಾಸ್ತ್ರಿ ಹಾಗೂ ಉಳ್ಳಾಲ ಶ್ರೀನಿವಾಸ ಮಲ್ಯರನ್ನು ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿಗಳೆಂದು ಪಂಡಿತ್ ನೆಹರೂ ಘೋಷಿಸಿದರು. ಮಲ್ಯರು ಅದಾಗಿ ರಾಷ್ಟ್ರೀಯ ರಾಜಕಾರಣದಲ್ಲಿ ತಮ್ಮ ಜಾಣ್ಮೆ ಸಂಘಟನಾ ಸಾಮರ್ಥ್ಯವನ್ನು ಸಮರ್ಪಕವಾಗಿ ಬಳಸಿಕೊಂಡರೆಂದು ಹೇಳಬಹುದು. ೧೯೫೨ರಲ್ಲಿ ಚುನಾವಣೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಲೋಕಸಭಾ ಸ್ಪರ್ಧಿಯಾಗಿ ಖ್ಯಾತ ಪತ್ರಕರ್ತ ಬೆನಗಲ್ ಶಿವರಾಯರು ಹಾಗೂ ಉಡುಪಿ (ಆಗ ಮಂಗಳೂರು ಲೋಕಸಭಾ ಕ್ಷೇತ್ರ) ಸ್ಥಾನಕ್ಕಾಗಿ ಉಳ್ಳಾಲ ಶ್ರೀನಿವಾಸ ಮಲ್ಯರು ಚೀಫ್‌ವಿಪ್ ಆಗಿ ಆರಿಸಲ್ಪಟ್ಟರು. ನಂತರ ಜರುಗಿದ ೧೯೬೨ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಉಡುಪಿ ಕ್ಷೇತ್ರದಿಂದ ಉಳ್ಳಾಲ ಶ್ರೀನಿವಾಸ ಮಲ್ಯ ಅವರೇ ಬಹುಮತ ಪಡೆಯುತ್ತಿದ್ದರು. ಕೊನೆ ತನಕ ನಿಧನರಾಗುವವರೆಗೆ ಮಲ್ಯರೇ ಚೀಫ್‌ವಿಪ್ ಆಗಿ ಕಾರ್ಯನಿರ್ವಹಿಸಿದರು.

❑

## ಆಕರ ಗ್ರಂಥಗಳು

೧. ಡಾ. ಅಮೃತ ಸೋಮೇಶ್ವರ – ಅಬ್ಬಕ್ಕ ಸಂಕಥನ – ೨೦೧೧ – ವೀರ ರಾಣಿ ಅಬ್ಬಕ್ಕ ಉತ್ಸವ ಸಮಿತಿ ಮಂಗಳೂರು.

೨. ಡಾ. ಹೆಚ್. ಎಲ್. ನಾಗೇಗೌಡ – ಪ್ರವಾಸಿ ಕಂಡ ಇಂಡಿಯಾ – ಸಂಪುಟ ೪ – ೨೦೦೭, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು

೩. ಡಾ. ಆರ್.ಗೋಪಾಲ್, ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ – ೨೦೦೭– ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ – ಮೈಸೂರು – ೧

೪. ಬಾರ್ಕೂರು ಉದಯ– ಇತಿಹಾಸದ ಶೋಧ– ಗತದ ಹುಡುಕಾಟ, ತುಳು ಸಂಸ್ಕೃತಿ ಚರಿತ್ರೆ ಕಥನ – ೨೦೧೫ – ಆಕೃತಿ ಆಶಯ ಪಬ್ಲಿಕೇಶನ್

೫. ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ – ಎನ್. ಗಣಪತಿ ರಾವ್ ಐಗಳ್– ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ೨೦೦೪


❑

# ಅನುಬಂಧ

## ಛಾಯಾಚಿತ್ರಗಳು



ಬೇರೆ ಬೇರೆ ದಿಕ್ಕುಗಳಿಂದ ಕಾಣಿಸುವ ಸೋಮೇಶ್ವರ ದೇವಸ್ಥಾನದ ಸುತ್ತಲೂ ಇರುವ ಕೆಂಪುಕಲ್ಲಿನ ಪ್ರಾಕಾರ



ಬೇರೆ ಬೇರೆ ದಿಕ್ಕುಗಳಿಂದ ಕಾಣಿಸುವ ಸೋಮೇಶ್ವರ ದೇವಸ್ಥಾನದ ಸುತ್ತಲೂ ಇರುವ ಕೆಂಪುಕಲ್ಲಿನ ಪ್ರಾಕಾರ



ಕೋಟೆಯ ಬಂದೂಕು ಇರಿಸುವ ರಂಧ್ರ



ಉಳ್ಳಾಲದ ಪಾಂಡೇಲ್‌ಪಕ್ಕ ಎಂಬಲ್ಲಿರುವ ಅಬ್ಬಕ್ಕರಾಣಿ
ವಾಸವಾಗಿದ್ದ ಮನೆಯ ವಿಶಾಲವಾದ ಹೊರಭಾಗ





ಮನೆಯ ಒಳಭಾಗ



ಕಿಟಕಿ–ಬಾಗಿಲು



ಪುರಾತನ ಶೈಲಿಯ ಕಿಟಕಿ



ಉಳ್ಳಾಲದ ವೃತ್ತದಲ್ಲಿರುವ ಅಬ್ಬಕ್ಕ ಪ್ರತಿಮೆ

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |